ಸಂಪುಟ 01 | ಸಂಚಿಕೆ 59 | ಶುಕ್ರವಾರ 09 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ಪ್ರವಾಸಿ ಭಾರತೀಯ ದಿವಸ್:**
ಭಾರತದ ಅಭಿವೃದ್ಧಿಗೆ ಸಾಗರೋತ್ತರ ಭಾರತೀಯ ಸಮುದಾಯದ ಕೊಡುಗೆಯನ್ನು ಗುರುತಿಸಲು ಜನವರಿ 9 ರಂದು ಆಚರಿಸಲಾಗುತ್ತದೆ. 1915 ರಲ್ಲಿ ಈ ದಿನದಂದು, ಮಹಾನ್ ಪ್ರವಾಸಿ ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದರು. ಅವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದರು ಮತ್ತು ಭಾರತೀಯರ ಜೀವನವನ್ನು ಶಾಶ್ವತವಾಗಿ ಬದಲಾಯಿಸಿದರು.

**2)ರಾಷ್ಟ್ರೀಯ ಕಾನೂನು ಜಾರಿ ಮೆಚ್ಚುಗೆ ದಿನ**
ಜನವರಿ 9 ಕಾನೂನು ಜಾರಿ ಸಂಸ್ಥೆಗಳ ಮೆಚ್ಚುಗೆಯ ದಿನವಾಗಿದ್ದು, ಕಾನೂನು ಜಾರಿ ಸಂಸ್ಥೆಗಳ ಅಗತ್ಯ ಕೆಲಸವನ್ನು ಗುರುತಿಸುವ ಮತ್ತು ಬೆಂಬಲಿಸುವ ಸಮಯ. ಈ ದಿನದಂದು, ಅನೇಕ ಜನರು ನೀಲಿ ಬಣ್ಣದ ಬಟ್ಟೆಗಳನ್ನು ಧರಿಸುತ್ತಾರೆ, ತಮ್ಮ ಸ್ಥಳೀಯ ಪೊಲೀಸ್ ಇಲಾಖೆಗೆ ಬೆಂಬಲ ಕಾರ್ಡ್‌ಗಳನ್ನು ಕಳುಹಿಸುತ್ತಾರೆ ಮತ್ತು ಸಾಮಾಜಿಕ ಮಾಧ್ಯಮದಲ್ಲಿ ಪೊಲೀಸ್ ಅಧಿಕಾರಿಗಳೊಂದಿಗೆ ತಮ್ಮ ಸಕಾರಾತ್ಮಕ ಅನುಭವಗಳನ್ನು ಹಂಚಿಕೊಳ್ಳುತ್ತಾರೆ.

**3)ರಾಷ್ಟ್ರೀಯ ಸ್ಥಿರ ವಿದ್ಯುತ್ ದಿನ ?**
ಜನವರಿ 9 ಪ್ರತಿ ವರ್ಷ ಜನವರಿ 9ರಂದು ರಾಷ್ಟ್ರೀಯ ಸ್ಥಿರ ವಿದ್ಯುತ್ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಸ್ಥಿರ ವಿದ್ಯುತ್ (Static Electricity) ಎಂಬ ರೋಚಕ ವೈಜ್ಞಾನಿಕ ತತ್ತ್ವವನ್ನು ತಿಳಿದುಕೊಳ್ಳಲು ಮತ್ತು ಗಮನಿಸಲು ಮೀಸಲಾಗಿದೆ

## ಸುಭಾಷಿತ

"ಮನಸ್ಸು ಸಿರಿವಂತವಾದರೆ ನಮ್ಮಲ್ಲಿ ಸಂಪತ್ತು ಇಲ್ಲದಿದ್ದರೂ ನಾವು ಸಿರಿವಂತರೇ. ಮನಸ್ಸೇ ಬಡವಾಗಿದ್ದರೆ ನಮ್ಮಲ್ಲಿ ಸಂಪತ್ತು ಇದ್ದರೂ ನಾವು ಬಡವರೇ! ಸಂತೃಪ್ತಿಗಿಂತ ಮಿಗಿಲಾದ ಸಂಪತ್ತಿಲ್ಲ.."

ಶ್ರೀ ಸಿದ್ಧೇಶ್ವರ ಸ್ವಾಮೀಜಿ

## ಪ್ರೇಯರ್ ಹಾಲ್ ಕಟ್ಟಡ ನಿರ್ಮಾಣದ ಪರವಾನಿಗೆಗೆ ಆಕ್ಷೇಪಣೆ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ರಾಯಚೂರು ನಗರದ ವಾರ್ಡ್ ನಂಬರ್: 32ರ ಅಲಿನಾಯಕ ಕಾಲೋನಿಯ ನಿವೇಶನ ಮುನ್ಸಿಪಾಲ್ ನಂ: 12-12-279/65ರಲ್ಲಿ ಅಬ್ದುಲ್ ರೋಫ್ ಪಾಷಾ ಇವರು ದಾರ್ಮಿಕ ಉದ್ದೇಶಕ್ಕಾಗಿ ಪ್ರೇಯರ್ ಹಾಲ್ ಕಟ್ಟಡವನ್ನು ನಿರ್ಮಾಣ ಮಾಡಲು ಅರ್ಜಿಸಲ್ಲಿಸಿದ್ದಾರೆ.**

ಈ ಸ್ಥಳದಲ್ಲಿ ನಕ್ಷೆ ಪ್ರಕಾರ ಕಟ್ಟಡ ಪರವಾನಿಗೆ ಕೋರಿ ಅರ್ಜಿ ಸಲ್ಲಿಸಿರುವುದರಿಂದ ಇದಕ್ಕೆ ಅಕ್ಕ-ಪಕ್ಕದ ಹಾಗೂ ಸಾರ್ವಜನಿಕ-ರಿಂದ ಯಾವುದೇ ಆಕ್ಷೇಪಣೆ ಇದ್ದಲ್ಲಿ ಈ ನೋಟೀಸ್ ಪ್ರಕಟಿಸಿದ 15 ದಿನಗಳ ಒಳಗಾಗಿ ದಾಖಲೆಗಳೊಂದಿಗೆ ಈ ಕಾರ್ಯಾಲಯಕ್ಕೆ ದೂರು ಸಲ್ಲಿಸಬಹುದಾಗಿದೆ. ಅವಧಿ ಮುಗಿದ ಮೇಲೆ ಬಂದ ಆಕ್ಷೇಪಣೆ ಅಥವಾ ತಕರಾರು ಸಲ್ಲಿಸಿದಲ್ಲಿ ಅದನ್ನು ಪರಿಗಣಿಸುವುದಿಲ್ಲ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಿಜೆಪಿ ಜತೆ ಜೆಡಿಎಸ್ ಶೀಘ್ರವೇ ವಿಲೀನಗೊಳ್ಳಲಿದೆ

# ಡಿ.ಕೆ.ಶಿವಕುಮಾರ್ ಭವಿಷ್ಯ

**ಬೆಂಗಳೂರು: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದ ಜೆಡಿಎಸ್ ಪಕ್ಷ ಬಿಜೆಪಿಯ ಜೊತೆ ಶೀಘ್ರವೇ ವಿಲೀನಗೊಳ್ಳುವ ಸಾಧ್ಯತೆ ಇದೆ ಎಂದು ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭವಿಷ್ಯ ನುಡಿದಿದ್ದಾರೆ. ಜೆಡಿಎಸ್‌ನಿಂದ ವಲಸೆ ಬಂದ ಮುಖಂಡರನ್ನು ಕಾಂಗ್ರೆಸ್‌ಗೆ ಸೇರ್ಪಡೆ ಮಾಡಿಕೊಂಡ ಬಳಿಕ ಮಾತನಾಡಿದ ಅವರು, ಕುಮಾರಸ್ವಾಮಿಯವರ ಧೋರಣೆ ನೋಡಿದರೆ ಶೀಘ್ರದಲ್ಲೇ ಬಿಜೆಪಿ ಜೊತೆ ವಿಲೀನಗೊಳ್ಳುವ ಲಕ್ಷಣಗಳು ಕಂಡು ಬರುತ್ತಿವೆ. ಒಂದು ವೇಳೆ ವಿಲೀನವಾದರೆ ನಮಗೆ ಅನುಕೂಲ ನೇರವಾಗಿ ಎರಡು ಪಕ್ಷಗಳ ಜೊತೆ ಹೋರಾಟ ಮಾಡಬಹುದು ಎಂದರು.**

ಆಟಕ್ಕೆ ಮೂರು ಪಕ್ಷ, ಲೆಕ್ಕಕ್ಕೆ ಎರಡು ಪಕ್ಷ ಎಂಬ ರೀತಿ ಇರದೆ, ಬೇಗ ಬಿಜೆಪಿಯೊಂದಿಗೆ ಜೆಡಿಎಸ್ ವಿಲೀನಗೊಳ್ಳಲಿ. ಜೆಡಿಎಸ್-ಬಿಜೆಪಿ ಎರಡು ಪಕ್ಷಗಳಲ್ಲಿರುವ ಮುಖಂಡರಲ್ಲಿ ಗೊಂದಲ ಇದೆ. ಇಂತಹ ತೀರ್ಮಾನವನ್ನು ಬೇಗ ಕೈಗೊಂಡರೆ ನಾವು ರಾಜಕೀಯವಾಗಿ ಏನಾದರೊಂದು ನಿರ್ಧಾರ ತೆಗೆದುಕೊಳ್ಳಬಹುದು. ಪ್ರಮುಖ ನಾಯಕರು ಅಡ್ಡಗೋಡೆಯ ಮೇಲೆ ದೀಪವಿಡುತ್ತಿದ್ದಾರೆ. ಇದರಿಂದ ನಮಗೂ ಮುಂದಿನ ಭವಿಷ್ಯ ಏನು ಎಂದು ತಿಳಿಯುತ್ತಿಲ್ಲ ಎಂಬ ಗೊಂದಲದಲ್ಲಿದ್ದಾರೆ. ವಿಲೀನವಾಗಲಿದೆ ಎಂದು ಖಚಿತವಾದರೆ ನಾವು ನಮ ದಾರಿ ನೋಡಿಕೊಳ್ಳುತ್ತೇವೆ ಎಂದು



ಬಹಳಷ್ಟು ನಾಯಕರು ಹೇಳುತ್ತಿದ್ದಾರೆ ಎಂದರು. ಗ್ರೇಟರ್ ಬೆಂಗಳೂರಿನ ಪಾಲಿಕೆಗಳಿಗೆ ಚುನಾವಣೆ ನಡೆಸಬೇಕಿದೆ. ಕಾಂಗ್ರೆಸ್ ಸ್ಪರ್ಧಾಕಾಂಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಪಶ್ಚಿಮ ಪಾಲಿಕೆಯಲ್ಲಿ ಸ್ಪರ್ಧಿಸಲು 247, ಉತ್ತರದಲ್ಲಿ 199, ದಕ್ಷಿಣದಲ್ಲಿ 129, ಕೇಂದ್ರದಲ್ಲಿ 106, ಪೂರ್ವದಲ್ಲಿ 78 ಸೇರಿ ಒಟ್ಟು 779 ಜನ ಅಭ್ಯರ್ಥಿಗಳು ಅರ್ಜಿಗಳನ್ನು ತೆಗೆದುಕೊಂಡು ಹೋಗಿದ್ದಾರೆ. ಕಾಂಗ್ರೆಸ್‌ನಿಂದ ಸ್ಪರ್ಧಿಸಲು ಟಿಕೆಟ್ ಬಯಸಿ ಅರ್ಜಿ ಪಡೆದಿರುವವರು ಕೊನೆಯ ದಿನಾಂಕದವರೆಗೂ ಕಾಯ್ದು ಕುಳಿತುಕೊಳ್ಳದೆ ಒಂದೆರಡು ದಿನದಲ್ಲೇ ಪಕ್ಷದ ಕಚೇರಿಗೆ ಅರ್ಜಿ ಸಲ್ಲಿಸಿ ಎಂದು ಸಲಹೆ ನೀಡಿದರು. ಅಭ್ಯರ್ಥಿಗಳ ಆಯ್ಕೆಗೆ ನಾವು ನಮದೇ ಆದ ರೀತಿಯಲ್ಲಿ ಪರಿಶೀಲನೆ ನಡೆಸಬೇಕಿದೆ. ಅದಕ್ಕಾಗಿ ಜ.10ರೊಳಗೆ ಅರ್ಜಿ ಸಲ್ಲಿಕೆ ಮಾಡಿ. ಅರ್ಜಿ ಹಾಕಿರುವವರು ಯಾರು ಏನು ಕೆಲಸ ಮಾಡಿದ್ದಾರೆ ಅವರ ಶಕ್ತಿ ಏನು ನೆಪ ಮಾತ್ರಕ್ಕೆ ಅರ್ಜಿ ಹಾಕಿದ್ದಾರೆಯೇ ಅವರಿಗೆ ಹಿಂಬಾಲಕರಿದ್ದಾರೆಯೇ ನಾಯಕತ್ವ ಮತ್ತು ಸೇವೆ ಮಾಡುವ ಗುಣ ಇದೆಯೇ ಪಕ್ಷಕ್ಕೆ ನಿಷ್ಠರಾಗಿರುತ್ತಾರೆಯೇ ಎಂಬೆಲ್ಲ ಮಾಹಿತಿಗ ಬಗ್ಗೆ ತಳಮಟ್ಟದಿಂದ ಪ್ರತ್ಯೇಕವಾದ ವರದಿ ಪಡೆದುಕೊಳ್ಳಬೇಕಿದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಬೆಂಗಳೂ-ರಿನಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಿಂದ ಜನ ನೆಮದಿಯಿಂದಿದ್ದಾರೆ. ವಿರೋಧ ಪಕ್ಷ ಬಿಜೆಪಿಯವರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ. ಬಿ ಖಾತಾಗಳಿಗೆ ಎ ಖಾತೆ ನೀಡಲಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಬಡವರಿಗೆ ಸಹಾಯ ಮಾಡುತ್ತಿದೆ. ಕಾನೂನು ಬಾಹಿರವಾಗಿ ಬಡವರಿಗೆ ನೆರವು ನೀಡುತ್ತಿದೆ. ಇದನ್ನೆಲ್ಲ ನೋಡಿದರೆ ಬಿಜೆಪಿಗೆ ಭವಿಷ್ಯ ಇಲ್ಲ ಎನಿಸುತ್ತಿದೆ ಎಂದು ಆ ಪಕ್ಷದ ಮುಖಂಡರೇ ನನ್ನ ಬಳಿ ಹೇಳಿಕೊಳ್ಳುತ್ತಿದ್ದಾರೆ ಎಂದರು. ಜೆಡಿಎಸ್ ನಾಯಕರು ತಮ ಪಕ್ಷವನ್ನು ಉಳಿಸಿಕೊಳ್ಳಲು ಬಿಜೆಪಿಯ ಜೊತೆ ಫ್ರೆಂಡ್ಲಿ ಫೈಟ್ ಮಾಡುವುದಾಗಿ ಹೇಳುತ್ತಿದ್ದಾರೆ. ಫ್ರೆಂಡ್ಲಿ ಫೈಟ್ ಏಕೆ ನೇರವಾಗಿ ಮೈತ್ರಿ ಮಾಡಿಕೊಂಡು ಹೋರಾಟ ಮಾಡಿ. ಫ್ರೆಂಡ್ಲಿ ಫೈಟ್‌ನಿಂದ ನಿಮದೇ ಪಕ್ಷದ ಕಾರ್ಯಕರ್ತರಿಗೂ ಗೊಂದಲಗಳಾಗುತ್ತವೆ. ನಾವು ನೇರವಾಗಿ ಹೋರಾಟ ಮಾಡುತ್ತೇವೆ, ನೀವು ಹೋರಾಟ ಮಾಡಿ. ರಾಜ್ಯದಲ್ಲಿ ಎರಡೇ ಪಕ್ಷಗಳು ಇರಬೇಕು ಇದರಿಂದ ರಾಜ್ಯಕ್ಕೂ ಒಳ್ಳೆಯದಾಗುತ್ತದೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ 5 ಪಾಲಿಕೆಗಳನ್ನು ಮಾಡಿರುವ ನಿರ್ಧಾರ ಮಹತ್ವದ್ದಾಗಿದೆ.

## ಕಲ್ಮಠ ಆಯುರ್ವೇದ ಕಾಲೇಜಿನಲ್ಲಿ ಯೋಗ ಹಾಗೂ ಷಟ್‌ಕ್ರಿಯೆಗಳ ಯೋಗಬ್ಯಾಸ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಸ್ಥಳೀಯ ಕಲ್ಮಠ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ವೈದ್ಯ ವಿದ್ಯಾರ್ಥಿಗಳಿಗಾಗಿ ಇತ್ತೀಚೆಗೆ ಷಟ್ ಕ್ರಿಯೆಗಳ ಯೋಗಾಭ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.**

ಬೆಳಿಗ್ಗೆ 6:30ರಿಂದ 7:30ರ ಅವಧಿಯಲ್ಲಿ ನಡೆದ ಈ ಶಿಬಿರವು ಕೆಲವು ಸರಳ ವ್ಯಾಯಾಮಗಳೊಂದಿಗೆ ಪ್ರಾರಂಭವಾಗಿ, ನಂತರ ವಿದ್ಯಾರ್ಥಿಗಳಿಗೆ ಕಪಾಲಭಾತಿ ಪ್ರಾಣಾಯಾಮ, ಅಲ್ಟರ್ನೇಟಿವ್ ಕಪಾಲಭಾತಿ ಹಾಗೂ ಬಸ್ತ್ರಿಕಾ ಕಪಾಲಭಾತಿಯ ಜೊತೆಗೆ ನಾಡಿ ಶುದ್ಧಿ ಪ್ರಾಣಾಯಾಮದ ಬಗ್ಗೆ ವಿಸ್ತಾರವಾದ ತರಬೇತಿ ನೀಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಯೋಗ ಗುರು ಅನ್ನದಾನಯ್ಯನವರು, ಯೋಗದ ಷಟ್ ಕ್ರಿಯೆಗಳು ಮನುಷ್ಯನ ಸ್ವಾಸ್ತ್ಯದ ಸಂಕೇತಗಳಾಗಿವೆ ಎಂದು ತಿಳಿಸಿದರು. ವಿಶೇಷವಾಗಿ ಚಳಿಗಾಲದಲ್ಲಿ ಕಾಣಿಸಿಕೊಳ್ಳುವ ಅಲರ್ಜಿ ಮತ್ತು ಸೈನಸ್‌ನಂತಹ ಸಮಸ್ಯೆಗಳನ್ನು ಹತೋಟಿಗೆ ತರಲು ಹಾಗೂ ಅಸ್ತಮಾವನ್ನು ಪರಿಣಾಮಕಾರಿಯಾಗಿ ಎದುರಿಸಲು ಜಲ ನೇತಿ ಮತ್ತು ಸೂತ್ರ ನೇತಿ ಅಭ್ಯಾಸಗಳು ಅತ್ಯುತ್ತಮ ಫಲಿತಾಂಶವನ್ನು ನೀಡಬಲ್ಲವು ಎಂದು ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯರಾದ ಜೀವನೇಶ್ವರಯ್ಯ ಹಿರೇಮಠ, ಆಡಳಿತಾಧಿಕಾರಿ ಉಮಾಶಂಕರ್, ಉಪನ್ಯಾಸಕಿ ಪ್ರಿಯಾಂಕ ಹಾಗೂ ಕಾಲೇಜಿನ ಎಲ್ಲಾ ವೈದ್ಯ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು.

## ಕೆ.ಹಂಚಿನಾಳ ಕ್ಯಾಂಪ್ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಎಸ್.ಡಿ.ಎಮ್.ಸಿ ಆಯ್ಕೆ,

❑ ನೈಜ್ಯ ದೆಸೆ ನ್ಯೂಸ್

**ತಾಲ್ಲೂಕಿನ ಸರ್ಕಾರಿ ಕಿರಿಯ ಪ್ರಾಥ-ಮಿಕ ಶಾಲೆ ಕೆ. ಹಂಚಿನಾಳ ಕ್ಯಾಂಪ್ (ಜೆ. ಆರ್) ಗ್ರಾಮದ ಸರ್ಕಾರಿ ಕಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಎಸ್.ಡಿ. ಎಮ್.ಸಿಯ ಸಭೆಯು ಶಾಲಾ ಆವರಣದಲ್ಲಿ ನಡೆಸಲಾಯಿತು ಎಂದು ಮುಖ್ಯ ಶಿಕ್ಷಕ ನಿಂಗರಾಜ ಕೊಪ್ಪದ್ ಹೇಳಿದರು.**

ಸಭೆಯಲ್ಲಿ ಹಾಜರಿದ್ದ ಪೋಷಕರು, ಶಿಕ್ಷಕರ ಸಮ್ಮುಖದಲ್ಲಿ ಎಸ್.ಡಿ.ಎಮ್.ಸಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಈ ಆಯ್ಕೆಯಲ್ಲಿ ಯಲ್ಲಪ್ಪ ತಾಯಿ ರೇಣುಕಮ್ಮರನ್ನು ಅಧ್ಯಕ್ಷರನ್ನಾಗಿ, ಯಮನಮ್ಮ ಗಂಡ ಪರಶುರಾಮರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.




ನೂತನವಾಗಿ ಆಯ್ಕೆಯಾದ ಅಧ್ಯಕ್ಷರು ಉಪಾಧ್ಯಕ್ಷರು ಮಾತನಾಡಿ, ಶಾಲೆಯ ಸರ್ವತೋಮುಖ ಅಭಿವೃದ್ಧಿ, ಮಕ್ಕಳ ಶಿಕ್ಷಣ ಗುಣಮಟ್ಟ, ಶಿಸ್ತು, ಸ್ವಚ್ಛತೆ ಹಾಗೂ ಸರ್ಕಾರದ ಯೋಜನೆಗಳನ್ನು ಸಮರ್ಪಕವಾಗಿ ಜಾ-ರಿಗೊಳಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಸಹ ಶಿಕ್ಷಕರಾದ ಐನಾಪರ್ತಿ ಶ್ರೀನಿವಾಸ್, ಮುಖಂಡರಾದ ಪೆತುರ್ ಹಾಗೂ ಪರಮೇಶ್, ಪೋಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

## ಉಸ್ಮಾನಿಯಾ ವಿಶ್ವವಿದ್ಯಾಲಯದ ಡೀನ್ ಆಗಿ ಕನ್ನಡಿಗ ಪ್ರೋ ಲಿಂಗಪ್ಪ ನೇಮಕ

❑ ನೈಜ್ಯ ದೆಸೆ ನ್ಯೂಸ್

**ಹೈದರಾಬಾದ್: ನೂರು ವರ್ಷಗಳ ಕಾಲ ಇತಿಹಾಸ ಇರುವ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡಿಗರಾದ ಕಲಬುರಗಿ ಜಿಲ್ಲೆಯ ಸುರಪುರದ ದೇವರಗೊನಾಳದ ನಿವಾಸಿಯಾಗಿರುವ ಪ್ರೋ ಲಿಂಗಪ್ಪ ಗೊನಾಳ ಅವರ ಸೇವೆಯನ್ನು ಪರಿಗಣಿಸಿದ ಉಪಕುಲಪತಿ ಕನ್ನಡ ವಿಭಾಗದ ಮುಖ್ಯಸ್ಥ ರಾಗಿ ಸೇವೆ ಸಲ್ಲಿಸಿರುವುದನ್ನು ಗುರುತಿಸಿ ಆರ್ಟ್ಸ್ ಕಾಲೇಜನ ಡೀನ್ ಆಗಿ ನೇಮಿಸಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ.**

ಇಲ್ಲಿಯವರೆಗೆ ಈ ಹುದ್ದೆಗೆ ಕನ್ನಡಿಗರು ಅಲಂಕರಿಸಿಲ್ಲ. ಮೊದಲನೆಯ ವ್ಯಕ್ತಿಗಳು ಪ್ರೋ ಲಿಂಗಪ್ಪ ಗೊನಾಳ ಎಂದರೆ ತಪ್ಪಾಗದು. ಇಂದು ವಿಶ್ವವಿದ್ಯಾಲಯದಲ್ಲಿ



ಪ್ರೋ ಲಿಂಗಪ್ಪ ಗೊನಾಳ ಅವರಿಗೆ ಹೈದರಾಬಾದ್ ನ ಎಲ್ಲಾ ಕನ್ನಡಿಗರ ಪರವಾಗಿ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘದ ನಿಯೋಗವನ್ನು ಅವರಿಗೆ ಭೇಟಿಯಾಗಿ ಸನ್ಮಾನಿಸಿ ಗೌರವಿಸಿದರು. ಅಧ್ಯಕ್ಷ ಧರ್ಮೇಂದ್ರ ಪೂಜಾರಿ. ಉಪಾಧ್ಯಕ್ಷ ಬಸವರಾಜ ಹಂಜನಾಳೆ. ಕೀರ್ತಿ ಕುಮಾರ ಮಾನ್ವಿಕರ. ಪ್ರಭು ಪೂಜಾರಿ. ಅಮರನಾಥ ಹಿರೋಡೆ. ರಾಜಕುಮಾರ ಮನ್ನಳಿ. ಜಗನಾಥ ತೊಂಡಾರೆ. ಮಾರುತಿ ಮೇತ್ರೆ. ಪ್ರೋ ಲಿಂಗಪ್ಪ ಗೋನಾಳ ಅವ-ರಿಗೆ ಕನ್ನಡ ಶ್ಯಾಲು ಹೊದಿಸಿ. ಕನ್ನಡ ಪುಸ್ತಕವನ್ನು ನೀಡಿ ಶುಭ ಹಾರೈಸಿದರು.

## ಪ್ರಜಾಪ್ರಭುತ್ವದ ಬಲವರ್ಧನೆಗೆ ಮತದಾನದ ಅರಿವು ಅತ್ಯಗತ್ಯ: ರಾಯಚೂರಿನಲ್ಲಿ ಪಿ.ಎಸ್. ವಸ್ತ್ರದ್ ಪ್ರತಿಪಾದನೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯಲ್ಲಿ ಮತದಾನದ ಪ್ರಕ್ರಿಯೆಯು ಅತ್ಯಂತ ಮಹತ್ವದ್ದಾಗಿದ್ದು, ಪ್ರತಿಯೊಂದು ಮತವು ಅಭ್ಯರ್ಥಿಯ ಗೆಲುವು ಮತ್ತು ಸೋಲನ್ನು ನಿರ್ಧರಿಸುವ ಶಕ್ತಿಯನ್ನು ಹೊಂದಿದೆ ಎಂದು ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರು ತಿಳಿಸಿದರು.**

ದಿನಾಂಕ 7-1-2026ರಂದು ರಾಯಚೂರಿನ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ ಮತ್ತು ಸ್ವೀಪ್ ಸ್ಪರ್ಧಾ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಪ್ರಸ್ತುತ ಮತಯಂತ್ರಗಳ ಮೂಲಕ ಮತದಾನದ ಪ್ರಕ್ರಿಯೆಯು ಅತ್ಯಂತ ಪಾರದರ್ಶಕವಾಗಿ ಜರುಗುತ್ತಿದ್ದು, ಈ ಕು-



ರಿತು ಸಾರ್ವಜನಿಕರಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ವಿವಿಧ ಹಂತದ ಅಧಿಕಾ-ರಿಗಳು ಅಚ್ಚುಕಟ್ಟಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಅವರು ಶ್ಲಾಘಿಸಿದರು.

ರಾಷ್ಟ್ರೀಯ ಮತದಾರರ ದಿನಾಚರಣೆಯ ಅಂಗವಾಗಿ ಜಿಲ್ಲೆಯಾದ್ಯಂತ ಪ್ರೌಢಶಾಲೆ, ಪದವಿ ಪೂರ್ವ ಹಾಗೂ ಪದವಿ ಮತ್ತು ಸ್ನಾತಕೋತ್ತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತದಾರರ ಸಾಕ್ಷರತಾ ಕ್ಲಬ್‌ಗಳನ್ನು ಸ್ಥಾಪಿಸಲಾಗಿದ್ದು, ಇವುಗಳ ಮೂಲಕ ವಿದ್ಯಾರ್ಥಿಗಳಲ್ಲಿ ಮತದಾನದ ಮಹತ್ವದ ಕುರಿತು ಅರಿವು ಮೂಡಿಸಲಾಗುತ್ತಿದೆ. ಸ್ವೀಪ್ ಕಾರ್ಯಕ್ರಮದ ಅಡಿಯಲ್ಲಿ ಆಯೋಜಿಸಲಾಗುವ ವಿವಿಧ ಸ್ಪರ್ಧೆಗಳು ವಿದ್ಯಾರ್ಥಿಗಳಿಗೆ ಚುನಾವಣಾ ಅಂಶಗಳನ್ನು ಅರ್ಥ-ಮಾಡಿಕೊಳ್ಳಲು ಮತ್ತು ಮಾದರಿ ಮತದಾರರ ಪಟ್ಟಿಯ ಸಿದ್ಧತೆಯ ಕುರಿತು ಮತಗಟ್ಟೆ ಅಧಿಕಾ-ರಿಗಳ ಜವಾಬ್ದಾರಿಗಳನ್ನು ತಿಳಿಯಲು ಸಹಕಾ-ರಿಯಾಗಿವೆ. ಈ ಸಂದರ್ಭದಲ್ಲಿ ಮಾತನಾಡಿದ ಶಾಲಾ ಶಿಕ್ಷಣ ವಿಭಾಗದ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ ಅವರು, ಈ ವರ್ಷ ಶಾಲಾ-ಕಾಲೇಜು ಮಟ್ಟದಲ್ಲಿ ಹಾಗೂ ತಾಲೂಕು, ಜಿಲ್ಲಾ ಮತ್ತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಲಾಗುತ್ತಿರುವ ಬಗ್ಗೆ ಸಭೆಗೆ ಸವಿಸ್ತಾರವಾದ ಮಾಹಿತಿ ನೀಡಿದರು.

ಈ ಸಭೆಯಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಂ. ಹನುಮಂತಪ್ಪ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ರಾಘವೇಂದ್ರ ಕುಲಕರ್ಣಿ, ಚುನಾವಣೆ ತಹಸಿಲ್ದಾರ್ ಪರಶುರಾಮ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರ ವಕ್ರಾಣಿ ಅವರು ಉಪಸ್ಥಿತರಿದ್ದರು. ಇವರೊಂದಿಗೆ ಆದಿಕವಿ ಮಹರ್ಷಿ ವಾಲ್ಮೀಕಿ ರಾಯಚೂರು ವಿಶ್ವವಿದ್ಯಾಲಯ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ವಿವಿಧ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರು, ತಾಲೂಕು ಆರೋಗ್ಯ ಅಧಿಕಾ-ರಿಗಳು, ಜಿಲ್ಲಾ ಡಯಟ್ ಕಾಲೇಜಿನ ಅಧಿಕಾರಿಗಳು ಮತ್ತು ವಿವಿಧ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾ-ರಿಗಳು ಭಾಗವಹಿಸಿದ್ದರು. ರಾಯಚೂರು ನಗರ ಮತ್ತು ಗ್ರಾಮೀಣ ಭಾಗದ ಮತಗಟ್ಟೆ ಅಧಿಕಾ-ರಿಗಳು ಹಾಗೂ ಜಿಲ್ಲಾ ಪಂಚಾಯತ್ ಸ್ವೀಪ್ ಸಮಿತಿಯ ಸಿಬ್ಬಂದಿಗಳು ಸಭೆಯಲ್ಲಿದ್ದು, ಕೊನೆಯಲ್ಲಿ ಚುನಾವಣಾ ಮಾಸ್ಟರ್ ತರಬೇತಿ-ದಾರರಾದ ಸದಾಶಿವಪ್ಪ ಅವರು ವಂದದಿಸಿದರು

# ಸಾಹಿತ್ಯ ಸಿಂಚನ

ನಿವೇದನೆ..!

ಹೃದಯ ಹಾಳೆಯ ಮೇಲೆ
ಅಮರ ಕಾವ್ಯ ಬರೆಯಬೇಕಿದೆ..
ಎದೆಯ ಸಾಲುಗಳ ಸಾಲಕೊಡು.!

ಮನದ ಕ್ಯಾನ್ವಾಸಿನ ಮೇಲೆ
ಅಪೂರ್ವ ಚಿತ್ತಾರ ಬಿಡಿಸಬೇಕಿದೆ
ಭಾವದ ಬಣ್ಣಗಳ ಉದ್ದರಿಕೊಡು.!

ಜೀವವೀಣೆಯ ತಂತಿ ಮೀಟಿ
ಪ್ರೀತಿಯ ಸ್ವರಗಳ ನುಡಿಸಬೇಕಿದೆ
ಪ್ರೇಮದ ಶೃತಿಗಳ ಕಡಕೊಡು.!

ನೆನಪಿನ ಚಿತ್ತಶಿಲೆಯ ಮೇಲೆ
ನಿನ್ನ ಪ್ರೇಮಪುತ್ಥಳಿಯ ಕೆತ್ತಬೇಕಿದೆ
ಅನುರಾಗದುಳಿಯ ಎರವುಕೊಡು.!

ನವೋಲ್ಲಾಸದ ನವರಂಗದ ಮೇಲೆ
ಪ್ರೇಮ ಪರವಶತೆಯಲಿ ನರ್ತಿಸಬೇಕಿದೆ
ನಿನ್ನ ಚೈತನ್ಯ ಗೆಜ್ಜೆಗಳ ಬಳುವಳಿಯಿಡು.!

ಸತ್ಯ ಸೊಬಗಿನ ರಮ್ಯಕನಸಿನೂರಿಗೆ
ಚಿರಒಲವಿನ ಸೇತುವೆ ಕಟ್ಟಬೇಕಿದೆ..
ನೀನೇ ನನ್ನೊಡನೆ ಬಂದುಬಿಡು.!!

ನನ್ನೊಡಲ ಗುಡಿಯ ಪೀಠದಲಿ
ನಿನ್ನಯ ಮೂರ್ತಿ ಪ್ರತಿಷ್ಠಾಪಿಸಬೇಕಿದೆ
ನೀನೆ ಪರಕಾಯಪ್ರವೇಶ ಮಾಡಿ ಬಿಡು.!

ಎ.ಎನ್.ರಮೇಶ್. ಗುಬ್ಬಿ.

## ಸರ್ಕಾರಿ ನೌಕರರ ಕ್ರೀಡಾಕೂಟ, ಸಾಂಸ್ಕೃತಿಕ ಸ್ಪರ್ಧೆಗೆ ಅಪರ ಜಿಲ್ಲಾಧಿಕಾರಿ ಶಿವಾನಂದ ಚಾಲನೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸಹಯೋಗದಲ್ಲಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜನವರಿ 8ರಂದು ಆಯೋಜಿಸಿದ್ದ ಎರಡು ದಿನಗಳ ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮಕ್ಕೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಚಾಲನೆ ನೀಡಿದರು.**

ಪುರುಷರಿಗೆ ಪುಟ್‌ಬಾಲ್, ವಾಲಿಬಾಲ್, ಕಬಡ್ಡಿ, ಕ್ರಿಕೆಟ್, ಬ್ಯಾಸ್ಕೆಟ್‌ಬಾಲ್ ಇತರೆ ಗುಂಪು ಕ್ರೀಡೆಗಳು ಹಾಗೂ ವೈಯಕ್ತಿಕ ಕ್ರೀಡೆಗಳಾದ ಚೆಸ್, ಓಟ, ಈಜು, ಗುಂಡು ಎಸೆತ ಸೇ-ರಿದಂತೆ ಇತರ ಕ್ರೀಡೆಗಳು ಹಾಗೂ ಮಹಿಳೆಯರಿಗೆ ಕಬಡ್ಡಿ, ಬಾಲ್ ಬ್ಯಾಡ್ಮಿಂಟನ್ ಇತರೆ ಗುಂಪು ಕ್ರೀಡೆಗಳ ಜೊತೆಗೆ ವೈಯಕ್ತಿಕ ಕ್ರೀಡೆಗಳಾದ ಚೆಸ್, ರನ್ನಿಂಗ್, ಈಜು, ಗುಂಡು ಎಸೆತ ಸೇರಿದಂತೆ ಇತರೆ ಕ್ರೀಡೆಗಳನ್ನು ಆಯೋಜನೆ ಮಾಡಲಾಗಿದ್ದು, ಜಿಲ್ಲೆಯಿಂದ ಒಟ್ಟು 1,266 ನೌಕರರು ಕ್ರೀಡಾಕೂಟಕ್ಕೆ ನೋಂದಣಿ ಮಾಡಿಸಿಕೊಂಡಿದ್ದಾರೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿರೇಶ್ ನಾಯಕ ಅವರು ತಿಳಿಸಿದರು. ಇದಕ್ಕೂ ಮುಂಚೆ, 2025-26 ಸಾಲಿನ ರಾಜ್ಯ ಸರಕಾರಿ ನೌಕರರ ರಾಯಚೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿ-ಕ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರುವ ನಾವು ಸ್ಪರ್ಧೆಗಳ-ನೀತಿ ಹಾಗೂ ತೀರ್ಪುಗಾರರ ನಿಯಮಗಳಿಗೆ ತೀರ್ಮಾನಕ್ಕೆ ಕ್ರೀಡಾ ಮನೋಭಾವದಿಂದ ಬದ್ಧರಾಗಿ ಕ್ರೀಡೆಗಳ ಹಿರಿಮೆಗಾಗಿ ಭಾಗವಹಿಸಿ ಕ್ರೀಡೆಗಳ ಉನ್ನತಿಗಾಗಿ ಶ್ರಮಿಸುತ್ತೇವೆಂದು ಪ್ರತಿಜ್ಞೆ ಬೋಧಿಸಲಾಯಿತು. ಅಲ್ಲದೆ ಮಹಿಳಾ ಕ್ರೀಡಾಪಟುಗಳಿಂದ ಕ್ರೀಡಾಜ್ಯೋತಿ ನೆರವೇರಿಸಲಾಯಿತು. ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಕೃಷ್ಣ ಶಾವಂತಗೇರಾ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಡಾ.ಶಂಕರಗೌಡ ಎಸ್.ಪಾಟೀಲ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಮುಖಂಡರಾದ ಹಾಜಿಬಾಬು, ದೊಡ್ಡ ನಿಂಗಪ್ಪ, ಭೀಮರಾಜ ಹವಾಲ್ದಾರ್, ಹನುಮಂತ್ರಾಯ, ಆರೀಫ್ ಮಿಯಾ, ಸುರೇಶ ಕುರ್ಡಿ, ಪಂಪಾಪತಿ ಹೂಗಾರ, ಭೀಮೇಶ ನಾಯಕ ಸೇರಿದಂತೆ ಇತರರು ಇದ್ದರು.

## ರಾಯಚೂರು ಸಿಟಿಯಲ್ಲಿ ಜನವರಿ 9ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ-02ರ 11ಕೆವಿ ಹೆಚ್ಚುವರಿ ಪರಿವರ್ತಕಗಳ ಕಾಮಗಾರಿ ಕೈಗೊಂಡ ಪ್ರಯುಕ್ತ ಜನವರಿ 9ರ ಬೆಳಿಗ್ಗೆ 11ರಿಂದ ಮಧ್ಯಾಹ್ನ 2ಗಂಟೆಯವರೆಗೆ ಎನ್.ಜಿ.ಓ ಕಾಲೋನಿ, ಜಮುಲಮ್ಮ ಗುಡಿ ಸೇರಿದಂತೆ ಸುತ್ತಲಿನ ಎಲ್ಲಾ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.**

ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ನಿರಂತರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532-226386, 08532-231999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ-02ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.10 ರಂದು ಶ್ರೀ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದಿಂದ ಪದಗ್ರಹಣ ಪ್ರತಿಭಾ ಪುರಸ್ಕಾರ.

ನೈಜ್ಯ ದೆಸೆ ನ್ಯೂಸ್




**ಶ್ರೀ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ನೂತನ ಪದಾಧಿಕಾರಿಗಳ ಪದಗ್ರಹಣ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಅಭಿನಂದನಾ ಸಮಾರಂಭವನ್ನು ಜನವರಿ 10 ರಂದು ಬೆಳಿಗ್ಗೆ ನಗರದ ಟೌನ್ ಹಾಲ್ ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಅಧ್ಯಕ್ಷ ಡಾ.ಬಸವರಾಜ ಪಿ.ನಾಯಕ ಹೇಳಿದರು.**

ನಗರದ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಉದ್ಘಾಟನೆ ಶಾಸಕ ಹಂಪನಗೌಡ ಬಾದರ್ಲಿ, ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ, ಹಾಗೂ ಎಂಎಲ್ಸಿ ಬಸನಗೌಡ ಬಾದರ್ಲಿ, ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಗೌರವಾಧ್ಯಕ್ಷರಾದ ತಿಮ್ಮಣ್ಣ ರಾಮತ್ನಾಳ್ ಅಧ್ಯಕ್ಷತೆ ವಹಿಸಿಕೊಳ್ಳುವರು. ಕಾರಟಗಿಯ ಪ್ರಾಧ್ಯಾಪಕ ಡಾ.ಹನುಮಂತಪ್ಪ ಚಂದಲಾಪುರ ಆಶಯ ನುಡಿಗಳನ್ನ ಆಡಲಿದ್ದಾರೆ. ಕಲ್ಬುರ್ಗಿ ನಿವೃತ್ತ ಪ್ರಾಧ್ಯಾಪಕರಾದ ಪ್ರೋ.ಡೊಣ್ಣೇಗೌಡರ ಪ್ರಸ್ತುತ ದಿನಮಾನದಲ್ಲಿ ವಾಲ್ಮೀಕಿ ಜನಾಂಗದ ಸ್ಥಿತಿ-ಗತಿ ಕುರಿತು ವಿಶೇಷ ಉಪನ್ಯಾಸವನ್ನು ನೀಡಲಿದ್ದಾರೆ.

ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟದ ಅಧ್ಯಕ್ಷ ಡಾ.ಬಸವರಾಜ ಪಿ.ನಾಯಕ ಪ್ರಾಸ್ತಾವಿಕ ನುಡಿಗಳನ್ನ ನುಡಿಯಲಿದ್ದಾರೆ. ಜೊತೆಗೆ ಮುಖ್ಯ ಅಥಿತಿಗಳಾದ ಮಾಜಿ ಸಂಸದ ಕೆ.ವಿರುಪಾಕ್ಷಪ್ಪ, ಮಾಜಿ ಸಚಿವ ವೆಂಕಟರಾವ್ ನಾಡಗೌಡ, ಮಸ್ಕಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಸುಡಾ ಅಧ್ಯಕ್ಷ ಬಾಬುಗೌಡ ಬಾದರ್ಲಿ, ಬಿಜೆಪಿ ಮುಖಂಡ ಕೆ.ಕರಿಯಪ್ಪ, ಡಿವೈಎಸ್ಪಿ ಜಿ.ಚಂದ್ರಶೇಖರ್, ಸೇರಿದಂತೆ ಅನೇಕ ಮುಖಂಡರು ಭಾಗವಹಿಸಲಿದ್ದಾರೆ ಎಂದರು. ನಂತರ ಗೌರವಾಧ್ಯಕ್ಷ ತಿಮ್ಮಣ್ಣ ರಾಮತ್ನಾಳ್ ಮಾತನಾಡಿ, ಸರಿಸುಮಾರು 200 ನೌಕರರು ಸೇರಿ, ಈ ಮಹರ್ಷಿ ವಾಲ್ಮೀಕಿ ಖಾಸಗಿ ನೌಕರರ ಒಕ್ಕೂಟವನ್ನು ಹುಟ್ಟುಹಾಕಿದ್ದೇವೆ. ಶೈಕ್ಷಣಿಕವಾಗಿ ಮುಂದುವರಿಯುವ ವಿದ್ಯಾರ್ಥಿಗಳಿಗಾಗಿ ಕಾರ್ಯಾಗಾರ, ಸೆಮಿನಾರಗಳನ್ನ ಮಾಡುವುದು.

ಬಡ ಮಕ್ಕಳಿಗೆ ಸ್ಕಾಲರ್ಶಿಪ್ ಗಾಗಿ ಸರ್ಕಾರದ ಕೊಂಡಿಯಾಗಿ ಕೆಲಸ ಮಾಡುವುದು. ಹೀಗೆ ಹತ್ತು ಹಲವಾರು ಧ್ಯೇಯ ಉದ್ದೇಶ ಇಟ್ಟುಕೊಂಡು ಒಕ್ಕೂಟ ರಚಿಸಿ ನೂತನ ಪದಾಧಿಕಾರಿಗಳ ಪದಗ್ರಹಣ ವಿದ್ಯಾರ್ಥಿಗಳಿಗಾಗಿ ಪ್ರತಿಭಾ ಪುರಸ್ಕಾರ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದೇವೆ ಎಂದರು. ಈ ವೇಳೆ: ಕಾರ್ಯಾಧ್ಯಕ್ಷ ವೀರೇಶ ನಾಯಕ ಕನ್ನಾರಿ, ಉಪಾಧ್ಯಕ್ಷ ಅಮರೇಶ ನಾಯಕ ಬೆಳ್ಳಿಗನೂರು, ಪ್ರಧಾನ ಕಾರ್ಯದರ್ಶಿ ಶಂಕರ ವಾಲಿಕಾರ, ಖಜಾಂಚಿ ಡಾ.ಬಸವರಾಜ ಎಲ್ ಚಿಗರಿ, ಮಾಧ್ಯಮ ಸಲಹೆಗಾರ ವೆಂಕೋಬ ನಾಯಕ ಬೂತಲದಿನ್ನಿ, ಸಾಂಸ್ಕೃತಿ-ಕ ಕಾರ್ಯದರ್ಶಿ ತಿಮ್ಮಣ್ಣ ನಾಯಕ ಕಲ್ಮಂಗಿ, ನಾಗರಾಜ ನಾಯಕ, ಬಾಯಪ್ಪ, ಯಲ್ಲಾಲಿಂಗ, ಸೇರಿದಂತೆ ಅನೇಕ ಮುಖಂಡರಿದ್ದರು.

# ಅರಕೇರಾ ತಾಲೂಕಿಗೆ ಈಡಿಗ ಸಮಾಜದ ಅಧ್ಯಕ್ಷರು ಪದಾಧಿಕಾರಿಗಳು ನೇಮಕ



ನೈಜ್ಯ ದೆಸೆ ನ್ಯೂಸ್

**ಅರಕೇರ: ಜ 08 ತಾಲೂಕಿನ ನೂತನ ಆರ್ಯ ಈಡಿಗ ಸಮಾಜದ ಅಧ್ಯಕ್ಷರಾಗಿ ಶ್ರೀ ರಾಚಣ್ಣ ಗಣೇಕಲ್, ಪ್ರಧಾನ ಕಾರ್ಯದರ್ಶಿಯಾಗಿ ಮಹಾದೇವಪ್ಪ ನಾಗೋಲಿಯನ್ನು ಗುರುವಾರ ನಾಗೋಲಿ ಗ್ರಾಮದ ಶ್ರೀ ಹನುಮಯ್ಯಪ್ಪ ತಾತಾ ಮಠದ ಆವರಣದಲ್ಲಿ ಸೇ-ರಿದ್ದ ಸಭೆಯಲ್ಲಿ ಆಯ್ಕೆ ಮಾಡಲಾಯಿತು.**

ಉಪಾಧ್ಯಕ್ಷರಾಗಿ ರಾಮಚಂದ್ರ ಆಕಳಕುಂಪಿ, ಹನುಮಯ್ಯ ಕೊತ್ತದೊಡ್ಡಿ, ರಾಮು ಮಲ್ಲೇದೇವರಗುಡ್ಡ, ರಂಗಪ್ಪ ಭೂಮನಗುಂಡ, ಸಂಘಟನೆ ಕಾರ್ಯದರ್ಶಿಯಾಗಿ ನಾಗರಾಜ ಜಾಡಲದಿನ್ನಿ, ಖಜಾಂಚಿಯಾಗಿ ಬಸವರಾಜ ಜಾಗಟಗಲ್, ಕಾರ್ಯಕಾರಿ ಸಮಿತಿ ಸದಸ್ಯರಾಗಿ ನರಸಯ್ಯ ಜೇರದಬಂಡಿ, ಹನುಮಂತ ನಾಗೋಲಿ, ಹುಸೇನಯ್ಯ ಜುಟಮರಡಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಆರ್ಯ ಈಡಿಗ ಸಮಾಜದ ಗೌರವಾಧ್ಯಕ್ಷ ಚನ್ನಯಪ್ಪ ತಾತಾ ನಾಗೋಲಿ, ಜಿಲ್ಲಾಧ್ಯಕ್ಷ ಶ್ರೀ ನರಸನಗೌಡ ಶಕ್ತಿನಗರ, ಜಿಲ್ಲಾ ಉಪಾಧ್ಯಕ್ಷ ಅಶೋಕ ಜಾಗಭಾವಿ, ಮುನೇಶಪ್ಪ ತಾತಾ ನಾಗೋಲಿ, ಶರಣಗೌಡ ಸುಂಕೇಶ್ವರಹಾಳ, ಅಮರೇಶ ಇಟಗಿ, ನಾಗೇಂದ್ರ ಭೂಮನಗುಂಡ, ನರಸಪ್ಪ ಮಲ್ಲೇದೇವರಗುಡ್ಡ, ನರಸಣ್ಣ ಜೇರಬಂಡಿ, ಸೇರಿದಂತೆ ವಿವಿಧ ಗ್ರಾಮಗಳ ಮುಖಂಡರು, ಸಮಾಜದ ಯುವಕರು ಸಭೆಯಲ್ಲಿ ಭಾಗವಹಿಸಿದ್ದರು.

# ಅಕ್ರಮ ಮದ್ಯ ಮಾರಾಟ ಕ್ರಮಕ್ಕೆ ಒತ್ತಾಯ.

ನೈಜ್ಯ ದೆಸೆ ನ್ಯೂಸ್



**ಲಿಂಗಸಗೂರು: ತಾಲುಕಿನ ಈಚನಾಳ, ಈಚನಾಳ ಕ್ರಾಸ್, ಈಚನಾಳ ತಾಂಡಾದ ಗ್ರಾಮಗಳ ಹಲವು ಕಡೆ ಪಾನ್ ಬೀಡಾ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದು, ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಈಚನಾಳ ಗ್ರಾಮ ಪಂಚಾಯತ ಮುಂಭಾಗದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ಯಂಕಮ್ಮ ಮೇಟಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಅಬಕಾರಿ ಸರ್ಕಲ್ ಇನ್ಸಪೆರ್ಕ್ಟ ಲಕ್ಷ್ಮಿ ದೇವಿ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.**

ಇತ್ತೀಚಿನ ದಿನಗಳಲ್ಲಿ ಈಚನಾಳ ಸೇ-ರಿದಂತೆ ಸುತ್ತಮುತ್ತಲಿನ ಕೆಲ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು ಇದ ರಿಂದ ಗ್ರಾಮದ ಬಹುತೇಕ ಯುವಕರು, ವೃದ್ಧರು, ಸಾರಾಯಿ ದಾಹಕ್ಕೆ ಬಲಿಯಾಗಿದ್ದಾರೆ. ಹಾಗಾಗಿ ಹಲವು ಕುಟುಂಬಗಳು ಬೀದಿಗೆ ಬಿದ್ದಿವೆ. ಇದರಿಂದ ಕುಟುಂಬಗಳ ಕಲಹಗಳಿಂದ ಗ್ರಾಮದಲ್ಲಿ ಅಶಾಂತಿ ಉಂ ಟಾಗುತ್ತಿದೆ, ಈ ಬಗ್ಗೆ ಅಬಕಾರಿ ಇಲಾಖೆ ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗುತ್ತಿಲ್ಲ.

ಹಾಗಾಗಿ ಈ ಕೂಡಲೇ ಆಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಅಬಕಾರಿ ವೃತ್ತನಿರೀಕ್ಷಕರಾದ ಲಕ್ಷ್ಮೀ ದೇವಿ, ಹಾಗೂ ಪಿಡಿಓ ಬಸಯ್ಯ ಅವರಿಗೆ ಸಂಜೀವಿನಿ ಮಹಿಳಾ ಸಂಘಟನೆಗಳ ಮುಖಂಡರು ಮನವಿ ಪತ್ರ ಸಲ್ಲಿಸುವ ಮೂಲಕ ಒತ್ತಾಯಿಸಿದರು. ಈ ಸಂಧರ್ಭದಲ್ಲಿ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷರಾದ ಯಂಕಮ್ಮ ಮೇಟಿ, ಕಾರ್ಯದರ್ಶಿ ಚಂದ್ರಿಕಾ, ಸರಸ್ವತಿ ಬಡಿಗೇರ್, ಶೋಭಾ ಮೇಟಿ,ರೈತ ಸಂಘದ ದೇವಪ್ಪ ಕರಡಿ, ಮಲ್ಲರೆಡ್ಡಿ ಸೇರಿದಂತೆ ವಿವಿಧ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

# ಕರ್ನಾಟಕ ಜನ ವೇದಿಕೆ ಸಮಿತಿಯಿಂದ ರಾಷ್ಟ್ರಪತಿಗಳಿಗೆ ಮನವಿ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ಕರ್ನಾಟಕ ಜನ ವೇದಿಕೆ ಸಮಿತಿ ತಾ.ಘಟಕದಿಂದ ರಾಷ್ಟ್ರಪತಿಗಳಿಗೆ ತಹಸೀಲ್ದಾರ್ ಭಿಮರಾಯ ಬಿ.ರಾಮಸಮುದ್ರ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ಜನ ವೇದಿಕೆ ತಾ.ಸಂ-ಯೋಜಕರಾದ ರವೀಂದ್ರ ಜಾನೇಕಲ್ ಮಾತನಾಡಿ.**

ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಯಾದ ವಿಜಯಪುರದಲ್ಲಿ ಜಿಲ್ಲೇಯ ಬಡಜನರಿಗೆ ಉತ್ತಮ ಆರೋಗ್ಯ ಸೇವೆ ಪಡೆಯುವುದಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಯ ಸ್ಥಾಪನೆಗಾಗಿ ವಿಜಯಪುರ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಹೋರಾಟ ಸಮಿತಿ ವತಿಯಿಂದ ಬಹಿದಿನಗಳಿಂದ ಹೋರಾಟ ನಡೆಸಿಕೊಂಡು ಬರಲಾಗುತ್ತಿದ್ದು ಹೋರಾಟಕ್ಕೆ ಸ್ಪಂದಿಸಿದ ಸರ್ಕಾರ ವಿಜಯಪುರ ನಗರದಲ್ಲಿ ಪಿ.ಪಿ.ಪಿ.ಮಾದ-ರಿಯ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆಗೆ ಮುಂದಾಗಿರುವುದನ್ನು ವಿರೋಧಿಸಿ ಸರ್ಕಾರದಿಂದಲ್ಲೇ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಮಾಡಬೇಕು

# ಸಿಂಧನೂರು ಜಿಲ್ಲೆಯಾಗಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ: ಡಾ.ಬಿ.ಎನ್.ಪಾಟೀಲ್.

ನೈಜ್ಯ ದೆಸೆ ನ್ಯೂಸ್




**ಸಿಂಧನೂರು: ಭೌಗೋಳಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಜನಸಂಖ್ಯೆಯಲ್ಲಿ, ಅಭಿವೃದ್ಧಿಯಲ್ಲಿ, ಕೃಷಿಯಲ್ಲಿ, ಕೈಗಾರಿಕೆಗಳು, ವಿವಿಧ ಕಛೇರಿಗಳು, ಪ್ರಾರಂಭವು ಸೇರಿದಂತೆ ಬಹಳ ಮುಂದುವರೆದ ಪ್ರದೇಶವಾಗಿದೆ. ಸಿಂಧನೂರು ತಾಲೂಕು, ಜಿಲ್ಲಾ ಕೇಂದ್ರವಾಗಲು ಉತ್ತಮ ವಾತಾವರಣ ಸೃಷ್ಟಿಯಾಗಿದೆ ಎಂದು ಡಾ.ಬಿ.ಎನ್.ಪಾಟೀಲ್ ಹೇಳಿದರು.**

ಗುರುವಾರ ನಗರದ ಟೌನ್ ಹಾಲ್ ನಲ್ಲಿ ಸಿಂಧನೂರು ಜಿಲ್ಲಾ ಹೋರಾಟ ಸಮಿತಿಯಿಂದ ಹಮ್ಮಿಕೊಳ್ಳಲಾದ ಪೂರ್ವಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪಕ್ಷಾತೀತವಾಗಿ ರಾಜಕೀಯ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಎಪಿಎಂಸಿ ವರ್ತಕರ ಸಂಘದವರು, ಕನ್ನಡ ಸಾಹಿತ್ಯ ಪರಿಷತ್ತು, ಸಮುದಾಯದ ಮುಖಂಡರು, ವಿವಿಧ ಸಂಘಟನೆಗಳ ಮುಖಂಡರು, ವಕೀಲರ ಸಂಘ, ಪತ್ರಕರ್ತರ ಸಂಘದ ಮುಖಂಡರು ಆದಿಯಾಗಿ, ಪ್ರತಿಯೊಬ್ಬರು ಭಾಗವಹಿಸಿ ಸಿಂಧನೂರು ತಾಲೂಕನ್ನ ಜಿಲ್ಲಾ ಕೇಂದ್ರವನ್ನಾಗಿಸಲು ಪ್ರತಿಯೊಬ್ಬರು ಸತತ ಪ್ರಯತ್ನ ಮಾಡೋಣ ಎಂದರು.

ರಾಜಶೇಖರ ಪಾಟೀಲ್ ಮಾತನಾಡಿ, ಜಿಲ್ಲಾಯಾಗಲು ಬೇರೆ ತಾಲೂಕುಗಳ ಜೊತೆಗೆ ಈ ತಾಲೂಕಿನಲ್ಲಿರುವ ಯಾವ ಊರುಗಳನ್ನು ತಾಲೂಕು ಮಾಡಬಹುದು ಎಂಬುದರ ಬಗ್ಗೆ ಆಲೋಚನೆ ಮಾಡಿ ತುರ್ವಿಹಾಳ ಪಟ್ಟಣ ಪಂಚಾಯತಿಯಿರುವ ಊರು ಜನಸಂಖ್ಯೆ ಜಾಸ್ತಿ ಇದೆ, ಶಾಲಾ ಕಾಲೇಜುಗಳಿವೆ, ನಾಡಕಛೇರಿ ಇದೆ, ಆರ್ಥಿಕ ಮತ್ತು ಭೌಗೋಳಿಕವಾಗಿ ಮುಂದುವರೆದ ಊರಾಗಿದೆ. ಅದರ ಜೊತೆಗೆ ಮಸ್ಕಿ, ಲಿಂಗಸ್ಗೂರು, ಕಾರಟಗಿ, ಸಿರಗುಪ್ಪ, ತಾವರಗೇರಾ, ಪ್ರಮುಖರ ಜೊತೆಗೆ ಮಾತನಾಡಿ, ಸಿಂಧನೂರು ಜಿಲ್ಲಾ ಕೇಂದ್ರ ಮಾಡೋಣ ಎಂದು ಮನವೊಲಿಸಬೇಕಾಗಿದೆ ಎಂದರು.

ಎಂ.ದೊಡ್ಡಬಸವರಾಜ ಮಾತನಾಡಿ, ಹಿರಿಯರ ಮುಖಂಡರ ಸಂಕಲ್ಪ ಸಿಂಧನೂರನ್ನು ಜಿಲ್ಲಾ ಕೇಂದ್ರ ಮಾಡಲು ಚೈತನ್ಯ, ಸ್ಪೂರ್ತಿ, ತುಂಬುವ ಕೊಂಡಿಯಾಗಿ ಕೆಲಸ ಮಾಡೋಣ, ಸರ್ವ ಧರ್ಮದವರಿಗೂ ಸರ್ವ ಪಕ್ಷದವ-ರಿಗೂ, ರೈತರಿಗೂ, ಕೃಷಿಕರಿಗೂ, ನಾಗರಿಕ-ರಿಗೂ, ಮಹಿಳೆಯರಿಗೂ, ವಿದ್ಯಾರ್ಥಿಗಳಿಗೂ ಸೇ-ರಿದಂತೆ ಪ್ರತಿಯೊಬ್ಬರಿಗೂ ಸಿಂಧನೂರು ಜಿಲ್ಲಾ ಕೇಂದ್ರ ಆಗುವುದರಿಂದ ಅನುಕೂಲವಾಗುತ್ತದೆ. ಇದರಿಂದಾಗಿ 100 ಕಿ.ಮೀ.ಅಂತರದಲ್ಲಿರುವ ರಾಯಚೂರಿಗೆ ಹೋಗುವುದು ತಪ್ಪುತ್ತದೆ. ಜೊತೆಗೆ ನಮ್ಮ ರಾಜಕೀಯ ಹಿರಿಯ ನಾಯಕರಾದ ಕೆ.ವಿರುಪಾಕ್ಷಪ್ಪ, ಹಂಪನಗೌಡ ಬಾದರ್ಲಿ, ವೆಂಕಟ-ರಾವ್ ನಾಡಗೌಡ, ಕೆ.ಕರಿಯಪ್ಪ, ಅನೇಕರು ಸರ್ಕಾರದ ಮಟ್ಟದಲ್ಲಿ ಧ್ವನಿ ಎತ್ತಬೇಕು ಎಂದರು.

ವೈ.ನರೇಂದ್ರನಾಥ, ಜಮಾಅತೆ ಇಸ್ಲಾಂ ಹಿಂದ್ ತಾಲೂಕು ಅಧ್ಯಕ್ಷ ಹುಸೇನ್ ಸಾಬ್, ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶರಣಪ್ಪ ಕೆ ಗೋನಾಳ, ಹಿರಿಯ ಪತ್ರಕರ್ತ ಡಿ.ಎಚ್. ಕಂಬಳಿ, ರೈತ ಮುಖಂಡ ಅಮೀನ್ ಪಾಷಾ ದಿದ್ದಿಗಿ, ಸರಸ್ವತಿ ಪಾಟೀಲ್, ಕೆ.ಭೀಮಣ್ಣ, ರವಿಗೌಡ ಮಲ್ಲದಗುಡ್ಡ, ಶ್ರೀದೇವಿ ಶ್ರೀನಿವಾಸ, ಎಚ್.ಎಫ್.ಮಸ್ಕಿ, ತಿಮ್ಮಣ್ಣ ನಾಯಕ್, ಕರೇಗೌಡ ಕುರುಕುಂದಿ, ಮೌನೇಶ ದೊರೆ, ಅಶೋಕ ಉಮಲೂಟಿ, ಶಾಂತನಗೌಡ ಜಾಗೀರದಾರ್, ಸೇರಿದಂತೆ ಸಾರ್ವಜನಿಕರು ಸೇರಿದಂತೆ ಒಮ್ಮತದ ನಿರ್ಧಾರ ತಿಳಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡು ಸಲಹೆ ಸೂಚನೆಗಳನ್ನು ನೀಡಿದರು.

## ನೇಮಕಾತಿ ಪ್ರಕಟಣೆ

IISc ನೇಮಕಾತಿ 2026–5 ಭದ್ರತಾ ಸಹಾಯಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ IISc ನೇಮಕಾತಿ 2026: 5 ಭದ್ರತಾ ಸಹಾಯಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಭಾರತೀಯ ವಿಜ್ಞಾನ ಸಂಸ್ಥೆಯು ಜನವರಿ 2026 ರ ಅಧಿಕೃತ ಅಧಿಸೂಚನೆಯ ಮೂಲಕ ಭದ್ರತಾ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 27, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 07–01–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22–ಜನವರಿ–2026 ಅಧಿಕೃತ ವೆಬ್‌ಸೈಟ್: k-tech.karnataka.gov.in

## ಪದೋನ್ನತಿ ಹೊಂದಿದ ಎ.ಎಸ್.ಐ. ಸೂಗಪ್ಪ ಕಾಡ್ಲೂರ ರವರಿಗೆ ಜಯನಗರ ನಿವಾಸಿಗಳಿಂದ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಜಯನಗರದಲ್ಲಿನ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನದ ಆವರಣದಲ್ಲಿ ಜನಯನಗರದ ನಿವಾಸಿಗಳಾದ ಮಾನ್ವಿ ಪೊಲೀಸ್ ಠಾಣೆಯ ಎ.ಎಸ್.ಐ. ಸೂಗಪ್ಪ ಕಾಡ್ಲೂರ ರವರನ್ನು ವಾರ್ಡಿನ ನಿವಾಸಿಗಳು ಹಾಗೂ ಶ್ರೀ ಬಸವೇಶ್ವರ ಯುವಕ ಮಂಡಳಿ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**



ಹಿರಿಯ ವಕೀಲರಾದ ಸಿದ್ದಲಿಂಗಪ್ಪ ಮಾತನಾಡಿ ಮಾನ್ವಿ ಪೊಲೀಸ್ ಠಾಣೆಯಲ್ಲಿ ಬಹು ವರ್ಷಗಳಿಂದ ಉತ್ತಮ ಸೇವೆಸಲ್ಲಿಸಿ ಎ.ಎಸ್.ಐ.ಆಗಿ ಸೂಗಪ್ಪ ಕಾಡ್ಲೂರ ರವರು ಪದೋನ್ನತಿ ಹೊಂದಿರುವುದು ಅತ್ಯಂತ ಸಂತೋಷದ ವಿಷಯವಾಗಿದ್ದು ಅವರು ತಮ್ಮ ವೃತ್ತಿ ಜೀವನದಲ್ಲಿ ಸಾರ್ವಜನಿಕ–ರಿಗೆ ಪೊಲೀಸ್ ಇಲಾಖೆಯಿಂದ ಹೆಚ್ಚಿನ ಸೇವೆಯನ್ನುಸಲ್ಲಿಸಿ ಉನ್ನತ ಹುದ್ದೆಗಳನ್ನು ಪಡೆಯಲಿ ಎಂದು ಆಶಿಸಿದರು. ಜಯನಗರ ವಾರ್ಡಿನ ಪ್ರಮುಖರಾದ ಸಂಗಪುರ ಕಿದ್ಮತ್ ಹಿರೇಮಠದ ಶ್ರೀ ವೀರಭದ್ರಯ್ಯಸ್ವಾಮಿಗಳು,ರಾಮಣ್ಣ ನಾಯಕ, ರಾಜಶೇಖರಯ್ಯಸ್ವಾಮಿ, ಶಿವಕುಮಾರ ಪಾಟೀಲ್, ದೇವರೆಡ್ಡಿ, ಚನ್ನಬಸವ ಕೋಡ್ಲಿ, ಲಿಂಗರಾಜ ಗಡಿಗಿ, ಈರಣ್ಣನಾಯಕ, ಸಿದ್ದಯ್ಯ ಕಳ್ಳಿಮಠ,ಅಮರೇಶಸಾಲಿಮಠ ಗಾವಾಯಿಗಳು, ಅಮರೇಶನಾಯಕ ಸೇರಿದಂತೆ ಇನ್ನಿತರರು ಇದ್ದರು.

## ಫೇಸ್ ರಿಕಾಗ್ನೈಜೇಷನ್ ಮೂಲಕ ಪೌಷ್ಠಿಕ ಆಹಾರ ವಿತರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಅಂಗವಾಡಿ ಕೇಂದ್ರದ ಫಲಾನುಭವಿಗಳಿಗೆ ಒದಗಿಸುವ ಇಲಾಖಾ ಸೇವಾ ಸೌಲಭ್ಯಗಳಲ್ಲಿ ಅರ್ಹ ಫಲಾನುಭವಿಗಳಾದ ಗರ್ಭಿಣಿ, ಬಾಣಂತಿ, 03 ವರ್ಷದೊಳಗಿನ ಮಕ್ಕಳಿಗೆ ಹಾಗೂ ಕಿಶೋರಿಯರಿಗೆ ಫೇಸ್ ರಿಕಾಗ್ನೈಜೇಷನ್ ಸಿಸ್ಟಂ ಮೂಲಕ ಪೂರಕ ಪೌಷ್ಠಿಕ ಆಹಾರ ವಿತರಣೆ ಮಾಡಲಾಗುತ್ತಿದೆ.**

ಇದಕ್ಕಾಗಿ ಭಾರತ ಸರಕಾರವು ಪೋಷಣ್ ಟ್ರೈಯಾಂಕರ್ ಎನ್ನುವ ತಂತ್ರಾಂಶ ಜಾರಿ ತಂದಿದ್ದು ಅರ್ಹ ಫಲಾನುಭವಿಗಳಿಗಷ್ಟೆ ಸೌಲಭ್ಯ ದೊರೆಯುವಂತೆ, ಬೇರೆ ಯಾವುದೇ ರೀತಿಯಲ್ಲಿ ಅವ್ಯವಹಾರವಾಗದಂತೆ ನೋಡಿಕೊಳ್ಳಲು ಓಟಿಪಿಯ ಮುಖಾಂತರವೇ ಸೇವೆಯನ್ನು ಒದಗಿಸಲಾಗುತ್ತಿದೆ. ನಕಲಿ ಫಲಾನುಭವಿಗಳ ತಡೆಗೆ ಫೇಸ್ ರಿಕಾಗ್ನೈಜೇಷನ್ ಸಿಸ್ಟಂ ಸಹಕಾರಿಯಾಗಿದೆ. ಒಬ್ಬ ಅರ್ಹ ಫಲಾನುಭವಿ ಪೂರಕ ಪೌಷ್ಠಿಕ ಆಹಾರ ಪಡೆಯಬೇಕಾದಲ್ಲಿ ಮೊದಲಿಗೆ "ಆಧಾರ್ ನೋಂದಣಿ ಮಾಡಿಸಬೇಕು. ನಂತರ ಆಧಾರ್ ವೆರಿಫಿಕೇಶನ್ ಆಗುತ್ತದೆ. ಇದಾದನಂತರ ಈ ಫೇಸ್ ರಿಕಾಗ್ನೈಜೇಷನ್ ಸಿಸ್ಟಂ ಮಾಡಲಾಗುತ್ತದೆ. ನಂತರ ಫಲಾನುಭವಿಯ ಫೇಸ್ ಮ್ಯಾಚ್ ಆಗಬೇಕು. ಈ ಎಲ್ಲಾ ಹಂತಗಳನ್ನು ಪೂರೈಸಿದ ನಂತರವೇ ಅರ್ಹ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರವನ್ನು ವಿತರಣೆ ಮಾಡಲಾಗುವುದು. ಪ್ರತಿ ತಿಂಗಳು 06 ತಿಂಗಳಿಂದ 03 ವರ್ಷದ ಫಲಾನುಭವಿಗಳಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಯನ್ನು ಬಾಲವಿಕಾಸ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಉಪಸ್ಥಿತಿಯಲ್ಲಿ ಮಾಡಲಾಗುತ್ತದೆ. ಅದೇ ರೀತಿಯಲ್ಲಿ ಅಂಗನವಾಡಿ ಕೇಂದ್ರದ ಪೋಟೋ ಕ್ಯಾಪ್ಚರ್‌ನ್ನು ಸಹ ಮಾಡಲಾಗುತ್ತಿದೆ. ಹೀಗಾಗಿ ಕೇಂದ್ರ ಸರಕಾರದ ಮಹತ್ವಾಕಾಂಕ್ಷೀ ಯೋಜನೆಯನ್ನು ಕರ್ನಾಟಕದಲ್ಲಿ ಕಟ್ಟುನಿಟ್ಟಾಗಿ ಜಾರಿ ಮಾಡಲಾಗಿದೆ ಹಾಗೂ ಪಾರದರ್ಶಕತೆ ತರಲು ಇದು ಸಹಕಾರಿಯಾಗಿದೆ. ಗರ್ಭಿಣಿ, ಬಾಣಂತಿ ಮತ್ತು 06 ವರ್ಷದೊಳಗಿನ ಮಕ್ಕಳ, ಪೌಷ್ಠಿಕ ಆಹಾರ, ಚುಚ್ಚುಮದ್ದು ಮತ್ತು ಆರೋಗ್ಯದ ಕುರಿತು ಪರಿಶೀಲಿಸಲು ಮನೆ ಭೇಟಿ ದಿನಾಂಕಗಳು ಆನ್‌ಲೈನ್‌ನಲ್ಲಿ ತೋರಿಸುತ್ತದೆ. ಈ ದಿನಾಂಕದಂದು ಫಲಾನುಭವಿಗಳನ್ನು ಮನೆ ಭೇಟಿ ಮಾಡಿ ಅಗತ್ಯ ಮಾಹಿತಿ ಮತ್ತು ಸೇವೆಯನ್ನು ಒದಗಿಸುವಲ್ಲಿ ಹೋಮ್ ವಿಜಿಟ್ವ ತುಂಬ ಅನುಕೂಲಕರವಾಗಿದೆ ಎಂದು ರಾಯಚೂರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ತಾಲೂಕು ದಲಿತ ವಿದ್ಯಾರ್ಥಿ ಪರಿಷತ್ತಿನ ನೂತನ ಕ್ಯಾಲೆಂಡರ್ ಬಿಡುಗಡೆ

ನೈಜ್ಯ ದೆಸೆ ನ್ಯೂಸ್

**ಪಿಎಸ್ಐ ಗ್ರಾಮೀಣ ಪೊಲೀಸ್ ಠಾಣೆ ತುರ್ವಿಹಾಳ ಹಾಗೂ ಗ್ರಾಮ ಪಂಚಾಯಿತಿ ಕಲಮಂಗಿ ಅಭಿವೃದ್ಧಿ ಅಧಿಕಾರಿಗಳು ದಲಿತ ವಿದ್ಯಾರ್ಥಿ ಪರಿಷತ್ ತಾಲೂಕು ಸಮಿತಿಯಿಂದ 2026ರ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.**



ದಲಿತ ವಿದ್ಯಾರ್ಥಿ ಪರಿಷತ್ ತಾಲೂಕ ಅಧ್ಯಕ್ಷ ದುರುಗೇಶ ಕಲಮಂಗಿ ಮಾತನಾಡಿ, ರಾಜ್ಯದಾದ್ಯಂತ ಲಕ್ಷಾಂತರ ವಿದ್ಯಾರ್ಥಿ ಯುವ ಜನರನ್ನು ಹೊಂದಿರುವ ಸಂಘಟನೆ ಕಾರ್ಯ ಪ್ರವೃತ್ತಿಯಾಗಿದೆ, ಸಮಿತಿಯ ಧ್ಯೆಯ ವಾಕ್ಯ ವಿದ್ಯೆಯೆ ವಿಮೋಚನೆಗೆ ಹೆದ್ದಾರಿ ಎನ್ನುವ ನಿಟ್ಟಿನಲ್ಲಿ ಶಿಕ್ಷಣಕ್ಕೆ ಪ್ರಮುಖ ಪ್ರಾಶಸ್ತ್ಯ ನೀಡಿ, ವಿದ್ಯಾರ್ಥಿ ಯುವ ಜನರಿಗಾಗಿ ಹಗಲಿರಳು ಶ್ರಮಿಸುವಂತಹ ಸಂಘಟನೆಯಾಗಿದೆ. ಅದರ ಭಾಗವಾಗಿ ನಾಡಿನದ್ಯಂತ ವಿದ್ಯಾರ್ಥಿಗಳ ಏನೇ ಸಮಸ್ಯೆಯಿದ್ದರು ಅವರಿಗೆ ಸ್ಪಂದಿಸುತ್ತಾ ಹಲವಾರು ಹೋರಾಟಗಳ ಮುಖೇನ ವಿದ್ಯಾರ್ಥಿ ಯುವ ಜನರ ಹಕ್ಕುಗಳನ್ನು ಕೊಡಿಸುವಲ್ಲಿ ಯಶಸ್ವಿ ಕಂಡಿದ್ದೇವೆ.

ಅಷ್ಟೇ ಅಲ್ಲದೆ ರಾಜ್ಯದಾದ್ಯಂತ ಅಂಬೇಡ್ಕರ್ ಅವರ ಹೆಸರಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸಿ ಲಕ್ಷಾಂತರ ರೂಪಾಯಿ ಬಹುಮಾನಗಳನ್ನು ಕೂಡ ನೀಡುತ್ತಿದೆ. ಜೊತೆಗೆ ಉಚಿತ ಕೋಚಿಂಗ್ ಬಂದಿದ್ದೇವೆ ಇದರ ಭಾಗವಾಗಿ ಗುರುವಾರ ಸಮಿತಿಯ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಪಿಎಸ್ಐ ಸುಜಾತ ಮಾತನಾಡಿ, ಈ ಒಂದು ಕ್ಯಾಲೆಂಡರ್ ವಿಶೇಷವಾಗಿದೆ. ಮಹಾನ್ ವ್ಯಕ್ತಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಾಧನೆಯ ಒಂದೊಂದು ದಿನಾಂಕದಂದು ಮಾಡಿದ ಸಾಧನೆಯನ್ನು ಕುರಿತು ಕ್ಯಾಲೆಂಡರ್ ಬಿಡುಗಡೆ ಮಾಡಿದ್ದಾರೆ. ಜನವರಿಯಿಂದ ಹಿಡಿದು ಡಿಸೆಂಬರ್ ವರೆಗೆ ಅವರ ಸಾಧನೆಯನ್ನೇ ತೋರಿಸಿದ್ದಾರೆ ಎಂದು ಹೇಳಿದರು.

ಪಂಚಾಯತ್ ಅಭಿವೃದ್ಧಿ ಅಧಿಕಾ–ರಿಗಳಾದ ಹುಚ್ಚಪ್ಪ ನೇಗಲಿ ಅವರು ಮಾತನಾಡಿ, ದಲಿತ ವಿದ್ಯಾರ್ಥಿ ಪರಿಷತ್ ಎಂಬುವುದು ದಲಿತರಿಗಾಗಿ ಅಲ್ಲದೆ ಪ್ರತಿಯೊಬ್ಬರಿಗಾಗಿ ಸಹ ಉತ್ತಮ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿ ತೊಂದರೆ ಇದ್ದರೆ, ಮುಂಚೂಣಿಯಲ್ಲಿ ಬಂದು ಸ್ಪಂದಿಸುವಂತಹ ಕಾರ್ಯ ಈ ಸಂಘಟನೆ ಮಾಡುತ್ತಿದೆ. ಕ್ಯಾಲೆಂಡರ್ ಬಿಡುಗಡೆ ಮಾಡಿ, ಡಾ.ಬಾಬಾ ಸಾಹೇಬ್ ಅಂಬೇಡ್ಕರವರ ಸಾಧನೆಯ ಭಾವಚಿತ್ರಗಳನ್ನು ಸಹ ಅಳವಡಿಸಿದ್ದಾರೆ ಎಂದು ಹೇಳಿದರು. ಈ ಸಂದರ್ಭದಲ್ಲಿ: ಆಂಜನೇಯ ನಾಯಕ ಗ್ರಾ.ಪಂ ಅಧ್ಯಕ್ಷ, ಮುಖಂಡರಾದ ಹನುಮಂತ ಕಲ್ಮಂಗಿ, ಮೊಹಮ್ಮದ್ ಸುಲೇಮಾನ್, ಶಶಿಕುಮಾರ, ಯಲ್ಲಪ್ಪ, ದೇವೇಂದ್ರ, ಸೇ–ರಿದಂತೆ ವಿದ್ಯಾರ್ಥಿಗಳು ಇದ್ದರು.

# ಶೀಘ್ರ ನೊಂದಣಿ ಮತ್ತು ಜೋಳ ಖರೀದಿ ಕೇಂದ್ರ ಸ್ಥಾಪನೆಗೆ ಸಿಂಧನೂರು ತಹಶೀಲ್ದಾರಗೆ ಮನವಿ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ರಾಯಚೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಜೋಳ ಬೆಳೆದಿದ್ದು, ಜನವರಿ 1 ರಿಂದಲೇ ಜೋಳ ಕಟಾವು ಪ್ರಾರಂಭವಾಗಿದ್ದು, ಸರಕಾರ ಮತ್ತು ಜಿಲ್ಲಾಡಳಿತ ಇದುವರೆಗೂ ಯಾವುದೇ ರೀತಿಯ ನೊಂದಣಿ ಪ್ರಕ್ರಿಯೆ ಕೂಡ ಪ್ರಾರಂಭ ಮಾಡಿಲ್ಲಿ ಜೋಳ ಖರೀದಿ ಕೇಂದ್ರ ಪ್ರಾರಂಭ ಮಾಡುವುದು ಯಾವಾಗ ಕಳೆದ ವರ್ಷ ಇದೆ ರೀತಿ ಜೋಳ ಖರೀದಿ ಕೇಂದ್ರ ತಡವಾಗಿ ಪ್ರಾರಂಭ ಮಾಡಿದ್ದರಿಂದ ರೈತರು ಬೆಳೆದ ಜೋಳ ಹುಳ ಬಂದು ಖರೀದಿ ಕೇಂದ್ರಕ್ಕಾಗಿ ಹರಸಾಹಸ ಪಡಬೇಕಾಯಿತು.**

ಜಿಲ್ಲೆಯ ರೈತರು ತಹಶೀಲ್ದಾರ ಕಛೇರಿ ಗೇಟ್ ಬಂದ್ ಮಾಡಿ ಹೋರಾಟ ಮಾಡಿದರೂ, ಒಂದು ಕಡೆ ರಸ್ತೆ ತಡೆ, ಒಂದು ಕಡೆ ಸಿಂಧನೂರು ಬಂದ್ ಕರೆ ವಿನೂತನ ಪ್ರತಿಭಟನೆಯ ಫಲವಾಗಿ ಖರೀದಿ ಕೇಂದ್ರ ಪ್ರಾರಂಭ ಮಾಡಿದರೂ ಕೇವಲ ಎಕರೆ ಗೆ 15 ಕ್ವಿಂಟಲ್ ಜೋಳ ತೆಗೆದುಕೊಂಡ ಪರಿಣಾಮ ಉಳಿದ ಜೋಳ ಮಾರುಕಟ್ಟೆಯಲ್ಲಿ ಬೇಕಾಬಿಟ್ಟಿ ದರಕ್ಕೆ ಮಾರಾಟ ಮಾಡಿ ಸಾಲದ ಸೂಳಿಗೆ ಸಿಲುಕಿರುವುದು ತಮ್ಮ ಕಣ್ಣಾ ಮುಂದೆ ಇದೆ.ಈ ವರ್ಷ ಅತಿ ಹೆಚ್ಚು ಮಳೆಯಿಂದಾಗಿ ರೈತರು ಬೆಳೆದ ಬೆಳೆಗಳು ಎಲ್ಲಾ ಸಂಪೂರ್ಣ ನಾಶವಾಗಿರುವುದು ಕೂಡ ತಮ್ಮ ಗಮನದಲ್ಲಿ ಇದೆ.

ಈ ಜೋಳ ಬೆಳೆದ ರೈತರು ಕೂಡ ಸರಿಯಾದ ಸಮಯಕ್ಕೆ ಖರೀದಿ ಕೇಂದ್ರ ಪ್ರಾರಂಭವಾಗದೇ ಹೋದಲ್ಲಿ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುವ ಸಂಧರ್ಭ ನಿರ್ಮಾಣವಾಗುತ್ತದೆ. ರೈತರು ದಂಗೆ ಎದ್ದು ಬೀದಿ ಇಳಿದು ಹೋರಾಟ ಮಾಡುವ ಮುಂಚೆ ಜಿಲ್ಲಾಡಳಿತ ಎಚ್ಚೆತ್ತುಗೊಂಡು ಜೋಳ ನೋಂದಣಿ ಮತ್ತು ಜೋಳ ಖರೀದಿ ಕೇಂದ್ರ ಪ್ರಾರಂಭಿಸಿಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಒತ್ತಾಯಿಸಲಾಯಿತು.

# ಸಮಾಜ ಸೇವಕ ಅಸ್ಕಿ ಕಾರ್ಯ ಅನುಕರಣೀಯ: ಮುಖಂಡ ಶಿವರಾಜ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಮ್ಮ ಫೌಂಡೇಶನ್ ದ ಮೂಲಕ ಜಾತಿ ಮತ ಭೇದವಿಲ್ಲದೆ ಸಮಾಜದ ಎಲ್ಲ ವರ್ಗದ ಜನರ ಸೇವೆಯನ್ನು ಮಾಡುತ್ತಿರುವ ಸಮಾಜ ಸೇವಕ ಸಿ.ಬಿ.ಅಸ್ಕಿ ಅವರ ಕಾರ್ಯ ಅತ್ಯಂತ ಶ್ಲಾಘನೀಯ ಎಂದು ಯುವ ಮುಖಂಡ ಶಿವರಾಜ ಗುಂಡಕನಾಳ(ನಾಗೂರ) ಹೇಳಿದರು. ಗುರುವಾರ ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದಲ್ಲಿ ಸಿ.ಬಿ.ಅಸ್ಕಿ ನೇತೃತ್ವದ ಅಸ್ಕಿ ಫೌಂಡೇಶನ್ ಕೊಣ್ಣೂರ ವತಿಯಿಂದ ಹಮ್ಮಿಕೊಂಡ 2026ರ ನೂತನ ಕ್ಯಾಲೆಂಡರ್ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.**



ಫೌಂಡೇಶನ್ ಅಧ್ಯಕ್ಷ, ಸಮಾಜ ಸೇವಕ ಸಿ.ಬಿ.ಅಸ್ಕಿ ಅವರು ಮಾತನಾಡಿ ನಮ್ಮ ಫೌಂಡೇಶನ್ ಮೂಲಕ ನಾನು ನನ್ನ ಶಕ್ತಿಗನುಸಾರವಾಗಿ ಕೆಲವು ಸೇವಾ ಕಾರ್ಯಗಳನ್ನು ಮಾಡುತ್ತಿದ್ದೇನೆ ಇದಕ್ಕೆ ನಿಮ್ಮೆಲ್ಲರ ಸಹಕಾರವಿದೆ. ಈ ಬಾರಿ ನಮ್ಮ ಫೌಂಡೇಶನ್ ದಿಂದ ಹೊರ ತಂದ ನೂತನ ಕ್ಯಾಲೆಂಡರ್ ಬಹಳ ವಿಶಿಷ್ಟವಾಗಿದ್ದು ನಮ್ಮ ಮತಕ್ಷೇತ್ರದಲ್ಲಿ ನಡೆಯಲಿರುವ ಎಲ್ಲಾ ಪ್ರಮುಖ ಕಾರ್ಯಕ್ರಮಗಳ ಮಾಹಿತಿಯನ್ನು ಒಳಗೊಂಡಿದೆ. ಇದು ಶ್ರೀ ಮಠದಲ್ಲಿ ಪೂಜ್ಯರ ಹಾಗೂ ಮುಸ್ಲಿಂ ಧರ್ಮಗುರುಗಳ ಸಮ್ಮುಖದಲ್ಲಿ ಬಿಡುಗಡೆಗೊಳ್ಳುತ್ತಿರುವುದು ನನ್ನ ಸೌಭಾಗ್ಯವೆಂದು ಭಾವಿಸುತ್ತೇನೆ ಎಂದರು. ಸಾನಿಧ್ಯ ವಹಿಸಿ ವೇ.ಮೂ.ಮುರುಗೇಶ ವಿರಕ್ತಮಠ ಮಾತನಾಡಿ ಅಸ್ಕಿ ಅವರು ಶ್ರೀ ಮಠದ ಭಕ್ತರಾಗಿದ್ದಾರೆ ಅವರಿಗೆ ಖಾಸ್ಗತ ಅಜ್ಜನ ಆಶೀರ್ವಾದ ಸದಾ ಇದೆ ಅವರು ಇನ್ನೂ ಉತ್ತರೋತ್ತರವಾಗಿ ಬೆಳೆಯಲಿ ಎಂದರು.

ಮುಸ್ಲಿಂ ಧಾರ್ಮಿಕ ಮುಖಂಡ ಸೈಯದ್ ಶಕೀಲ ಅಹ್ಮದ್ ಖಾಜಿ ಸಮ್ಮುಖ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಮುಖರಾದ ಎಸ್.ಎಚ್.ಪಾಟೀಲ( ಬಾವೂರ), ಹುಸೇನ ಜಮಾದಾರ, ವೀರೇಶ ಬಾಗೇವಾಡಿ, ಇಬ್ರಾಹಿಂ ಮನ್ಸೂರ, ವಿಜಯಸಿಂಗ್ ಹಜೇರಿ, ಪರಶುರಾಮ ತಂಗಡಗಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಿಬೂಬ ಕೆಂಭಾವಿ, ಜೈಭೀಮ ಮುತ್ತಗಿ,ಶಮ್ಮುದ್ದೀನ ನಾಲಬಂದ, ಮಹಾಂತೇಶ ಬೊಮ್ಮನಹಳ್ಳಿ, ಬಸವರಾಜ ಜೀರಲಭಾವಿ(ಬಳಗಾನೂರ), ರೆಹಮಾನ್ ಅವಟಿ(ಕೊಣ್ಣೂರ), ಸದ್ದಾಮ್ ಮನಗೂಳಿ, ವೀರೇಶಗೌಡ ಅಸ್ಕಿ, ರಾಮನಗೌಡ ಹೊಸಮನಿ, ಎಲ್ಲಪ್ಪ ಮಾದರ, ಆಸಿಫ್ ಕೆಂಭಾವಿ,ರಮೇಶ ಹಿಪ್ಪರಗಿ, ಆನಂದ್ ಅಸ್ಕಿ, ಮಲ್ಲು ಢವಳಗಿ, ಆಬೀದ ಲಾಹೋರಿ,ಶಾಹಿದ್ ಶಿವಣಗಿ ಹಾಗೂ ಫೌಂಡೇಶನ್ ಪದಾಧಿಕಾರಿಗಳು ಇದ್ದರು.

# ಪಟ್ಟಣ ಪಂಚಾಯತಿಗೆ ಲೋಕಾಯುಕ್ತ ಅಧಿಕಾರಿಗಳ ದಿಢೀರ್ ಭೇಟಿ–ದಾಖಲೆಗಳ ಪರಿಶೀಲನೆ



ನೈಜ್ಯ ದೆಸೆ ನ್ಯೂಸ್

ಸಿರವಾರ: ಲೋಕಾಯುಕ್ತ ಅಧಿಕಾ–ರಿಗಳು ಬುಧವಾರ ಸಂಜೆ ಸಿರವಾರ ಪಟ್ಟಣ ಪಂಚಾಯತಿಗೆ ದಿಢೀರ್ ಭೇಟಿ ನೀಡಿ ವಿವಿಧ ದಾಖಲೆಗಳ ಪರಿಶೀಲನೆ ನಡೆಸಿದರು.

**ಸಾರ್ವಜನಿಕರಿಗೆ ಒದಗಿಸುತ್ತಿರುವ ಸರ್ಕಾರಿ ಸೇವೆಗಳು, ಎ–ಖಾತಾ, ಬಿ–ಖಾತಾ ವಿತರಣೆ, ಪೌರಾಕಾರ್ಮಿಕರ ಸೇವೆ, ಸಕಾಲದಲ್ಲಿ ಅರ್ಜಿಗಳ ವಿಲೇವಾರಿ, ಕುಡಿಯುವ ನೀರು ಪೂರೈಕೆ, ತ್ಯಾಜ್ಯ ವಿಲೇವಾರಿ ವಾಹನಗಳ ನಿರ್ವಹಣೆ, ಶೌಚಾಲಯ, ತೆರಿಗೆ ಸಂಗ್ರಹ ಸೇರಿದಂತೆ ಇನ್ನಿತರೆ ಮಹತ್ವದ ದಾಖಲೆಗಳನ್ನು ಪರಿಶೀಲನೆ ನಡೆಸಿದರು.**

ಸಾರ್ವಜನಿಕರಿಗೆ ಉಚಿತವಾಗಿ ಸೇವೆಗಳನ್ನು ಒದಗಿಸುವುದಕ್ಕೆ ಅಧಿಕಾ–ರಿಗಳು ಹಾಗೂ ಸಿಬ್ಬಂದಿಗಳು ಯಾವುದೇ ಲಂಚ ಕೇಳುವುದು, ಹಣಕ್ಕೆ ಬೇಡಿಕೆ ಇಡುವ ವಿಷಯಕ್ಕೆ ಸಂಬಂಧಿಸಿ ಪಟ್ಟಣ ಪಂಚಾಯತಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೊಬೈಲ್ ಫೋನ್'ಗಳನ್ನು ಪರಿಶೀಲನೆ ಮಾಡಿದ್ದಾರೆ. ದಾಖಲೆಗಳ ಪರಿಶೀಲನೆ ವೇಳೆ ಏನೇ ಲೋಪದೋಷಗಳು ಕಂಡು ಬಂದರೇ ಅಂಥಹ ದಾಖಲೆಗಳನ್ನು ಪಡೆದುಕೊಂಡು ಬೆಂಗಳೂ–ರಿನ ಕೇಂದ್ರ ಕಚೇರಿಗೆ ಸಲ್ಲಿಸಿ ವಿಚಾರಣೆ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಲೋಕಾಯುಕ್ತ ಡಿವೈಎಸ್ಪಿ ಭರತ್ ರೆಡ್ಡಿ ಬೆಳಗಾವಿ, ಪಿಐ ರಾಜಶೇಖರಯ್ಯ ಬೆಂಗಳೂರು, ಪ್ರಕಾಶ್, ನಾಗಣ್ಣ ಪೂಜಾರಿ, ಶಂಕರ್ ಹಾಗೂ ಪ.ಪಂ.ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸಮುದಾಯ ಸಂಘಟನಾ ಅಧಿಕಾರಿ ಹಂಪಯ್ಯ ಪಾಟೀಲ್, ಜೆಇ ಸೈಯದ್ ಮೊಹಮ್ಮದ್ ಹಸನ್ ಸೇರಿದಂತೆ ಸಿಬ್ಬಂದಿಗಳು ಇದ್ದರು.

# ಸಿರವಾರದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಭೂಮಿ ಮಂಜೂರು ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ

ನೈಜ್ಯ ದೆಸೆ ನ್ಯೂಸ್

**ಸಿರವಾರ: ರಾಯಚೂರು ಜಿಲ್ಲೆಯ ಸಿರವಾರ ತಾಲೂಕಿನ ಸಿರವಾರ ಸೀಮಾದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕಾಗಿ 10 ಗುಂಟೆ ಜಮೀನನ್ನು ಬೆಂಗಳೂರಿನ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರು ಮಾಡುವ ಪ್ರಸ್ತಾವನೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅಧಿಕೃತ ಅನುಮೋದನೆ ನೀಡಲಾಗಿದೆ.**

ಈ ಜಮೀನು ಮಂಜೂರಾತಿ ಸರ್ಕಾರದ ನೀತಿ ನಿಯಮಗಳ ಅನುಸಾರವಾಗಿದ್ದು, ಪಕ್ಷದ ಚಟುವಟಿಕೆಗಳಿಗೆ ಅಗತ್ಯವಾದ ಶಾಶ್ವತ ಸೌಕರ್ಯ ಒದಗಿಸುವ ಉದ್ದೇಶ ಹೊಂದಿದೆ ಎಂದು ತಿಳಿದುಬಂದಿದೆ. ಸಿರವಾರ ಸೇರಿದಂತೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಬಲಪಡಿಸುವ ದೃಷ್ಟಿಯಿಂದ ಈ ನಿರ್ಧಾರವನ್ನು



ಮಹತ್ವದ ಹೆಜ್ಜೆಯಾಗಿ ನೋಡಲಾಗುತ್ತಿದೆ. ನಿರ್ಮಾಣವಾಗಲಿರುವ ಕಾಂಗ್ರೆಸ್ ಭವನದಲ್ಲಿ ಪಕ್ಷದ ಕಚೇರಿ, ಸಭಾಂಗಣ, ಕಾರ್ಯಕರ್ತರ ತರಬೇತಿ ಕೇಂದ್ರ, ಸಾರ್ವಜನಿಕರ ಅಹವಾಲು ಸ್ವೀಕಾರ ವ್ಯವಸ್ಥೆ ಹಾಗೂ ವಿವಿಧ ಸಾಮಾಜಿ–ಕ?ರಾಜಕೀಯ ಕಾರ್ಯಕ್ರಮಗಳನ್ನು ನಡೆಸಲು ಅಗತ್ಯ ಸೌಕರ್ಯಗಳು ಲಭ್ಯವಾಗಲಿವೆ.

ಸ್ಥಳೀಯ ಕಾಂಗ್ರೆಸ್ ಮುಖಂಡರು ಈ ತೀರ್ಮಾನಕ್ಕೆ ಹರ್ಷ ವ್ಯಕ್ತಪಡಿಸಿದ್ದು, ಇದು ಕಾರ್ಯಕರ್ತರಿಗೆ ಪ್ರೇರಣೆಯಾಗುವುದರ ಜೊತೆಗೆ ಜನಸಾಮಾನ್ಯರೊಂದಿಗೆ ನೇರ ಸಂಪರ್ಕ ಸಾಧಿಸಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೆ, ಸಿರವಾರ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ಚಟುವಟಿಕೆಗಳು ಇನ್ನಷ್ಟು ಸಕ್ರಿಯಗೊಳ್ಳಲಿದ್ದು, ಮುಂದಿನ ದಿನಗಳಲ್ಲಿ ಸಂಘಟನೆ ಬಲವರ್ಧನೆಗೆ ಇದು ದಿಟ್ಟ ಆಧಾರವಾಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ. ಸಚಿವ ಸಂಪುಟದ ಅನುಮೋದನೆಯ ನಂತರ, ಶೀಘ್ರದಲ್ಲೇ ಜಮೀನು ಹಸ್ತಾಂತರ ಪ್ರಕ್ರಿಯೆ ಪೂರ್ಣಗೊಳ್ಳುವ ಸಾಧ್ಯತೆ ಇದ್ದು, ಅಗತ್ಯ ಕಾನೂನು ಪ್ರಕ್ರಿಯೆ ಮುಗಿದ ಬಳಿಕ ಕಾಂಗ್ರೆಸ್ ಭವನ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### M.Pharm ಇಂಡಸ್ಟ್ರಿಯಲ್ ಫಾರ್ಮಸಿ

ಇಂಡಸ್ಟ್ರಿಯಲ್ ಫಾರ್ಮಸಿ ಎಂಬುದು ಎರಡು ವರ್ಷಗಳ M.Pharm ಸ್ನಾತಕೋತ್ತರ ಕೋರ್ಸ್ ಆಗಿದ್ದು, ಔಷಧಗಳ formualtion, ಉತ್ಪಾದನೆ, ಗುಣಮಟ್ಟ ನಿಯಂತ್ರಣ ಮತ್ತು ಹೊಸ ಔಷಧಗಳನ್ನು ಅಭಿವೃದ್ಧಿಪಡಿಸುವಲ್ಲಿನ ವೈಜ್ಞಾನಿಕ ಜ್ಞಾನವನ್ನು ನೀಡುತ್ತದೆ; ಇದು ಸಕ್ರಿಯ ಪದಾರ್ಥಗಳು, ತಂತ್ರಜ್ಞಾನಗಳು, ನಿಯಂತ್ರಕ ಮಾರ್ಗಸೂಚಿಗಳು ಮತ್ತು ವಿಶ್ಲೇಷಣಾತ್ಮಕ ವಿಧಾನಗಳ ಮೇಲೆ ಕೇಂದ್ರೀಕರಿಸುತ್ತದೆ, ಫಾರ್ಮ (ಇಂಡಸ್ಟ್ರಿಯಲ್ ಫಾರ್ಮಸಿ) ಕೋರ್ಸ್ ಅನ್ನು 2021 ರಲ್ಲಿ ಪರಿಚಯಿಸಲಾಯಿತು. ಕೈಗಾರಿಕಾ ಫಾರ್ಮಸಿಯು ಸಕ್ರಿಯ ಪದಾರ್ಥಗಳು, ಸಹಾಯಕ ವಸ್ತುಗಳು, ತಾಂತ್ರಿಕ ಪ್ರಕ್ರಿಯೆಗಳು ಮತ್ತು ಸಲಕರಣೆಗಳ ಜ್ಞಾನ ಮತ್ತು ತಿಳುವಳಿಕೆಯನ್ನು ಸಂಂ–ಯೋಜಿಸುತ್ತದೆ ಮತ್ತು ಸ್ಕೇಲ್ ಅಪ್ ತಂತ್ರಗಳಲ್ಲಿ ಹೊಸ ಔಷಧಗಳನ್ನು ಅಭಿವೃದ್ಧಿಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು B.Pharm ನಂತರ GPAT ಸ್ಕೋರ್ ಅಥವಾ ಸಂಸ್ಥೆಯ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆಯಬಹುದಾಗಿದೆ. ಕೋರ್ಸ್ ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು) ಯಾರಿಗೆ: B.Pharm ಪೂರ್ಣಗೊಳಿಸಿದವರು ಔಷಧೀಯ ಉತ್ಪಾದನಾ ತಂತ್ರಜ್ಞಾನ ಫಾರ್ಮಸಿ ರೆಗ್ಯುಲೇಟರಿ ಅಫೇರ್ಸ್ (Pharmacy Regulatory Affairs) ಡ್ರಗ್ ಡೆವಲಪ್‌ಮೆಂಟ್ (Drug Development) ಕ್ವಾಲಿಟಿ ಕಂಟ್ರೋಲ್ ಮತ್ತು ಅಶ್ಯೂರೆನ್ಸ್ (Quality Control & Assurance) ಡೋಸೇಜ್ ಫಾರ್ಮ್ ವಿಶ್ಲೇಷಣೆ (Dosage Form Analysis) ಮೆಟಿರಿಯಲ್ ಮ್ಯಾನೇಜ್‌ಮೆಂಟ್ (Material Management) ಪೇಟೆಂಟ್ ಜ್ಞಾನ (Patent Knowledge) ಕೋರ್ಸ್‌ನ ಉದ್ದೇಶ: ಔಷಧಗಳನ್ನು ದೊಡ್ಡ ಪ್ರಮಾಣದಲ್ಲಿ (scale-up) ಅಭಿವೃದ್ಧಿಪಡಿಸುವುದು ಮತ್ತು ಉತ್ಪಾದಿಸುವುದು. ಔಷಧೀಯ ಕಂಪನಿಗಳಲ್ಲಿ ಉತ್ಪಾದನಾ ಪ್ರಕ್ರಿಯೆ ಮತ್ತು ಗುಣಮಟ್ಟವನ್ನು ನಿರ್ವಹಿಸುವುದು. ಹೊಸ ಔಷಧಗಳ ಸಂಶ್ಲೇಷಣೆ ಮತ್ತು ಮೌಲ್ಯಮಾಪನದಲ್ಲಿ ತೊಡಗಿಸಿಕೊಳ್ಳುವುದು. ಔಷಧಗಳ ಸುರಕ್ಷತೆ ಮತ್ತು ಪರಿಣಾಮಕಾರಿತ್ವವನ್ನು ಖಚಿತಪಡಿಸುವುದು. ಉದ್ಯೋಗಾವಕಾಶಗಳು: ಫಾರ್ಮಾಸ್ಯೂಟಿಕಲ್ ಕಂಪನಿಗಳಲ್ಲಿ ಉತ್ಪಾದನೆ, ಗುಣಮಟ್ಟ ನಿಯಂತ್ರಣ (QC), ಮತ್ತು ಗುಣಮಟ್ಟ ಭರವಸೆ (QA) ವಿಭಾಗಗಳಲ್ಲಿ ಕೆಲಸ. ಸಂಶೋಧನೆ ಮತ್ತು ಅಭಿವೃದ್ಧಿ (ಖ&ಆ) ವಿಭಾಗಗಳಲ್ಲಿ. ಫಾರ್ಮಾಕೋವಿಜಿಲೆನ್ಸ್ (Pharmacovigilance) ಮತ್ತು ರೆಗ್ಯುಲೇಟರಿ ಅಫೇರ್ಸ್. ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರಾಧ್ಯಾಪಕರು.

## ರಾಯಚೂರು ಸಿಟಿಯಲ್ಲಿ ಜನವರಿ 10ರಂದು ವಿದ್ಯುತ್ ವ್ಯತ್ಯಯ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ಇಲ್ಲಿನ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–02ರ 11ಕೆವಿ ಹೆಚ್ಚುವರಿ ಪರಿವರ್ತಕಗಳ ಕಾಮಗಾರಿ ಕೈಗೊಂಡ ಪ್ರಯುಕ್ತ ಜನವರಿ 10ರ ಬೆಳಿಗ್ಗೆ 11ರಿಂದ ಸಂಜೆ 5ಗಂಟೆವರೆಗೆ ಶಿವಂ ಅಸ್ಪತ್ರೆ, ಮಾಂಗಲ್ಯ ಶಾಪಿಂಗ್ ಮಾಲ್, ಲೋಹಾರ ವಾಡಿ, ಗಾಂಧಿ ಚೌಕ್, ಬಂದಾರ ಗಾಲ್ಲಿ, ಎಂ.ಜಿ.ರಸ್ತೆ,** ಹರಿಹರ ರಸ್ತೆ, ಮಕ್ತಲ್ ಪೇಟೆ, ಪಿಂಜರ ವಾಡಿ, ಶರಣಬಸವೇಶ್ವರ ಆಸ್ಪತ್ರೆ, ಬೆಟ್ಟದೂರ ಆಸ್ಪತ್ರೆ, ಪ್ಯಾರೇಸ್ ಗಾರ್ಡನ್, ಕುಂಬಾರ ಓಣಿ, ಮಡ್ಡಿ ಪೇಟೆ, ಬ್ರೆಸ್ತಾವಾರ ಪೇಟೆ, ಚಂದ್ರ ಮೌಳೇಶ್ವರ ಚೌಕ್ ಸೇರಿದಂತೆ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಹೆಚ್ಚಿನ ಮಾಹಿತಿಗಾಗಿ ಗ್ರಾಹಕರ ನಿರಂತರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999, 9448395622ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ಉಪ ವಿಭಾಗ–02ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಅಧಿಕಾರಿಗಳಿಗೆ ನಿಗದಿತ ಅವಧಿಯಲ್ಲಿ ಅನುದಾನ ಬಳಕೆಗೆ ಸೂಚನೆ.

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ.09 – ಸರಕಾರ ವಿವಿಧ ಇಲಾಖೆಗಳಿಗೆ ಅಭಿವೃದ್ಧಿ ಕಾಮಗಾರಿಗಳಿಗಾಗಿ ಬಿಡುಗಡೆ ಮಾಡಿದ ಅನುದಾನ ವನ್ನು ಅಧಿಕಾರಿಗಳು ನಿಗದಿತ ಅವಧಿ ಯೊಳಗೆ ಗುರಿ ಸಾಧಿಸಬೇಕೆಂದು ಜಿಲ್ಲಾ ಪಂಚಾಯ್ತಿ ಮುಖ್ಯ ಲೆಕ್ಕಾಧಿ ಕಾರಿ ಹಾಗೂ ಲಿಂಗಸಗೂರ ತಾ.ಪಂ ಆಡಳಿತಾಧಿಕಾರಿ ಡಾ.ವಿಜಯ ಶಂಕರ ಸೂಚಿಸಿದರು.**




ಸ್ಥಳೀಯ ತಾಪಂ ಸಭಾಂಗಣ ದಲ್ಲಿ ಇಲಾಖಾವಾರು ಪ್ರಗತಿ ಪರಿಶೀಲನಾ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕು ಪಂಚಾಯ್ತಿಯಿಂದ ಮಂಜೂರಾದ ಅನುದಾನವನ್ನು ಅಗತ್ಯಕ್ಕೆ ತಕ್ಕಂತೆ ಖರ್ಚು ಮಾಡುವ ಮೂಲಕ ನಿಗದಿತ ಅವಧಿಯೊಳಗೆ ಗುರಿ ಸಾಧಿಸಬೇಕು. ವಿನಾಕಾರಣ ವಿಳಂಬ ಧೋರಣೆ ತೋರುವುದು ಸರಿಯಲ್ಲ. ತಾಪಂ ಇಲಾಖೆ ಆರೋಗ್ಯ ಇಲಾಖೆಗೆ ನೀಡಿರುವ 13 ಲಕ್ಷ ರೂ. ಅನುದಾನ ಕಟ್ಟಡ ಮತ್ತು ಸಲಕರಣೆಗೆ ಬಳಕೆ ಮಾಡಬೇಕು. ರೋಗಿಗಳಿಗೆ ಅನುಕೂಲವಾಗುವ ಸಾಮಗ್ರಿಗಳನ್ನು ಖರೀದಿಸಬೇಕು. ತಾಲೂಕಿನ ಈಚನಾಳ, ನಾಗರಹಾಳ, ಸಜ್ಜಲಗುಡ್ಡ ಪ್ರಾಥ–ಮಿಕ ಆರೋಗ್ಯ ಕೇಂದ್ರಗಳಿಗೆ ಹೊಸ ಕಟ್ಟಡ ನಿರ್ಮಿಸಲಾಗಿದ್ದರೂ ದುರಸ್ತಿಗಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರಿಯಲ್ಲ, ಕೂಡಲೇ ಕಾಮಗಾರಿ ಬದಲಿಸುವಂತೆ ಟಿಎಚ್ಒ ಡಾ.ಅಮರೇಶ ಪಾಟೀಲರಿಗೆ ತಾಕೀತು ಮಾಡಿದರು.

ಸಿಡಿಪಿಒ ನಾಗರತ್ನ ಮಾತನಾಡಿ, ಇತ್ತೀಚಿಗೆ ನಾನು ಅಧಿಕಾರ ವಹಿಸಿ ಕೊಂಡಿದ್ದು, ಈ ಹಿಂದೆ ಕಳುಹಿಸಿದ ಪ್ರಸ್ತಾವನೆಗಳಲ್ಲಿ ಕೆಲವು ಬದಲಾವಣೆ ಮಾಡಬೇಕಿದೆ. ನರಕಲದಿನ್ನಿ, ಚಿತ್ತಾಪುರ, ಬ್ಯಾಲಿಹಾಳ, ಕನ್ನಾಪುರ ಹಟ್ಟಿ, ಆನೆಹೊಸೂರು, ಕಾಲಳೇರದೊಡ್ಡಿ, ಗೊಲ್ಲರದೊಡ್ಡಿ, ನಾಗರಹಾಳ, ಯರಜಂತಿ, ಗೌಡೂರು ತಾಂಡಾ, ಗುಡದನಾಳ ಅಂಗನವಾಡಿ ಕೇಂದ್ರಗ ಳಿಗೆ ಕಂಪೌಂಡ್ ನಿರ್ಮಾಣ, ಗೇಟ್ ಅಳವಡಿಕೆ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆ. ಮಾಚನೂರು ತಾಂಡಾ, ಯರ ಜಂತಿ ಅಂಗನವಾಡಿ ಕೇಂದ್ರಗಳ ಶೌಚಗೃಹ ನಿರ್ಮಾಣ ಕಾಮಗಾರಿ ಬದಲಾವಣೆ ಮಾಡಬೇಕಿದೆ. ಕಡೋಣಿ, ಜಾಲಿಬೆಂಚಿ, ರೋಡಲ ಬಂಡಾ, ಕೇಂದ್ರಗಳಿಗೆ ನಿರ್ಮಿಸಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಬಿಇಒ ಸುಜಾತಾ ಹೂನೂರು ಮಾತನಾಡಿ, ತಾಲೂಕಿನ ಗುಂತಗೋಳ, ಹಿರೇಹೆಸ ರೂರು, ಮಾಚನೂರು, ಬೆಂಚಲ ದೊಡ್ಡಿ, ಹಾಲಬಾವಿ, ಗೊಲಪಲ್ಲಿ, ರಾಮತ್ನಾಳ, ಹಲ್ಕಾವಟಗಿ, ನವಲಿ, ಉಳಿಮೇಶ್ವರ, ಹನೂರು, ರಾಯದುರ್ಗ, ಟಣಮನಕಲ್, ಬಾರಿಗಿಡ ದರದೊಡ್ಡಿ ಪ್ರಾಥಮಿಕ ಶಾಲೆಗಳಲ್ಲಿ ನೆಲಹಾಸು, ಕಿಟಕಿ, ಬಾಗಿಲುಗಳ ದುರಸ್ತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ದೇವರಭೂಪುರ ಪ್ರಾಥಮಿಕ ಶಾಲೆ ದುರಸ್ತಿ ಕಾಮಗಾರಿ ಬದಲಾವಣೆ ಮಾಡಲು ತಿಳಿಸಲಾಗಿದೆ ಎಂದು ಹೇಳಿದರು. ಕೃಷಿ ಇಲಾಖೆ ಅನುದಾನದಲ್ಲಿ ಲಿಂಗಸಗೂರು ರೈತಸಂಪರ್ಕ ಕೇಂದ್ರಕ್ಕೆ ಕಂಪೌಂಡ್ ಗೋಡೆ ನಿರ್ಮಿ ಸಲು ಪ್ರಸ್ತಾವನೆ ಸಲ್ಲಿಸಲಾಗಿತು. ಈಗಾಗಲೇ ಕಾಮಗಾರಿ ಪೂರ್ಣ ಗೊಂಡಿದೆ ಎಂದು ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ಮಲ್ಲಿ ಕಾರ್ಜುನ ತಿಳಿಸಿದರು. ಸಮಾಜ ಕಲ್ಯಾಣ ಇಲಾಖೆಯಲ್ಲಿ ನ್ಯಾಯಾಲ ಯದ ಆದೇಶದ ಮೇರೆಗೆ ಹೊರಗುತ್ತಿಗೆ ಆದ–ರದಲ್ಲಿ ನೇಮಕವಾದ ಸಿಬ್ಬಂದಿಗಳಿಗೆ ಎರಡು ದಿನದಲ್ಲಿ ವೇತನ ಪಾವತಿಸುವಂತೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗೆ ಜಿಪಂ ಮುಖ್ಯ ಲೆಕ್ಕಾಧಿಕಾರಿ ಡಾ.ವಿಜಯ ಶಂಕರ ಸೂಚಿಸಿದರು. ಈ ವೇಳೆ ತಾಪಂ ಇಒ ಉಮೇಶ ಇದ್ದರು.

# ಕರ್ನಾಟಕ ಜನ ವೇದಿಕೆ ಸಮಿತಿಯಿಂದ ರಾಷ್ಟ್ರಪತಿಗಳಿಗೆ ಮನವಿ



❑ ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ಕರ್ನಾಟಕ ಜನ ವೇದಿಕೆ ಸಮಿತಿ ತಾ.ಘಟಕದಿಂದ ರಾಷ್ಟ್ರಪತಿಗಳಿಗೆ ತಹಸೀಲ್ದಾರ್ ಭಿಮರಾಯ ಬಿ.ರಾಮಸಮುದ್ರ ರವರ ಮೂಲಕ ಮನವಿ ಸಲ್ಲಿಸಿ ಕರ್ನಾಟಕ ಜನ ವೇದಿಕೆ ತಾ.ಸಂಂ–ಯೋಜಕರಾದ ರವೀಂದ್ರ ಜಾನೇಕಲ್ ಮಾತನಾಡಿ.**

ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಯಾದ ವಿಜಯಪುರದಲ್ಲಿ ಜಿಲ್ಲೆಯ ಬಡಜನರಿಗೆ ಉತ್ತಮ ಆರೋಗ್ಯ ಸೇವೆ ಪಡೆಯುವುದಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಯ ಸ್ಥಾಪನೆಗಾಗಿ ವಿಜಯಪುರ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ ಹೋರಾಟ ಸಮಿತಿ ವತಿಯಿಂದ ಬಹಿದಿನಗಳಿಂದ ಹೋರಾಟ ನಡೆಸಿಕೊಂಡು ಬರಲಾಗುತ್ತಿದ್ದು ಹೋರಾಟಕ್ಕೆ ಸ್ಪಂದಿಸಿದ ಸರ್ಕಾರ ವಿಜಯಪುರ ನಗರದಲ್ಲಿ ಪಿ.ಪಿ.ಪಿ.ಮಾದ–ರಿಯ ಖಾಸಗಿ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆಗೆ ಮುಂದಾಗಿರುವುದನ್ನು ವಿರೋಧಿಸಿ ಸರ್ಕಾರದಿಂದಲ್ಲೇ ವೈದ್ಯಕೀಯ ಮಹಾವಿದ್ಯಾಲಯ ಸ್ಥಾಪನೆ ಮಾಡಬೇಕು ಎಂದು ನಡೆಸುತ್ತಿದ್ದ ಹೋರಾಟಗಾರರ ಮೇಲೆ ನೂರಾರು ಪೊಲೀಸ್ ಅಧಿಕಾ–ರಿಗಳು,ಸಿಬ್ಬಂದಿಗಳು ದಾಳಿ ನಡೆಸಿ ಬಂದಿಸಿದ್ದಾರೆ.

ಟೆಂಟ್ ಗಳನ್ನು ಕಿತ್ತು ಹಾಕಲಾಗಿದ್ದೆ ಕೂಡಲೇ ಶಾಂತಿಯುತ ಹೋರಾಟಗಾರರ ಮೇಲೆ ದಾಳಿ ಮಾಡಿದ ಆದಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು ಹಾಗೂ ಬಂದಿಸಿರುವ ಹೋರಾಟಗಾರರನ್ನು ಬಿಡುಗಡೆಗೊಳ್ಳಿಸಬೇಕು ಹಾಗೂ ಸರ್ಕಾರದಿಂದಲೇ ವಿಜಯಪುರದಲ್ಲಿ ಸರ್ಕಾರಿ ವೈದ್ಯಾಕೀಯ ವಿದ್ಯಾಲಯ ಸ್ಥಾಪನೆ ಮಾಡಬೇಕು ಎಂದು ಒತ್ತಾಯಿಸಿದರು. ವಸಂತ ಕೋಟ್ನೆಕಲ್, ದೇವರಾಜ್,ಆಬ್ರಹಾಂ ಪನ್ನೂರು,ಸದಾನಂದ ಪನ್ನೂರು, ಹಂಪಯ್ಯ, ಹುಲಿಗೆಮ್ಮ,ಚಾರ್ಲಿ ಉದ್ಬಾಳ್, ಬಸವರಾಜ ಹರವಿ, ಸೇರಿದಂತೆ ಇನ್ನಿತರರು ಇದ್ದರು.

# ನಾಟಕದಿಂದ ಜ್ಞಾನ ವೃದ್ಧಿ :ಡಿ,ಜಿ ಗುರುಕಾರ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ನಾಟಕ ನೋಡುವುದು ಹಾಗೂ ಓದುವದರಿಂದ ನಮ್ಮಲ್ಲಿ ಜ್ಞಾನ ವೃದ್ಧಿಯಾಗುತ್ತದೆ ಎಂದು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಡಿ.ಜಿ ಗುರಿಕಾರ ಹೇಳಿದರು.**



ಪದ ಆನೆಹೊಸೂರು ಗ್ರಾಮದಲ್ಲಿ ಮುದಗಲ್ ನ ಅಶೋಕಗೌಡ ಸುರೇಂದ್ರಗೌಡ ಗೆಳೆಯರ ಬಳಗ, ಕರ್ನಾಟಕ ಜಾನಪದ ಪರಿಷತ್ತು ಲಿಂಗಸುಗೂರು ತಾಲ್ಲೂಕು ಘಟಕ, ಶ್ರೀನಿವಾಸ ಜನ ಕಲ್ಯಾಣ ಟ್ರಸ್ಟ್ ಆನೆಹೊಸೂರು ಹಾಗೂ ಆನೆಹೊಸೂರು ಗ್ರಾಮ ಪಂಚಾಯಿತಿ ಸಹಯೋಗದಲ್ಲಿ ಜರುಗಿದ ನಾಟಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 'ಟಿ.ವಿ ಮಾಧ್ಯಮಗಳು ಬಂದ ನಂತರ ನಾಟಕಕ್ಕೆ ದೊಡ್ಡ ಪೆಟ್ಟು ಬಿದ್ದಂತೆ ಆಗಿದೆ. ನಾಟಕ ನೋಡುವರ ಸಂಖ್ಯೆ ಕಡಿಮೆಯಾಗಿದೆ. ಕಾದಂಬರಿ ಆಧಾರಿತ ನಾಟಕಗಳು ಜ್ಞಾನ ಹೆಚ್ಚಿಸುವುದರ ಜತೆಗೆ, ನೈತಿಕ ಮೌಲ್ಯಗಳ ಪಾಠ ಹೇಳಿ ಕೊಡುತ್ತಿವೆ' ಎಂದರು.ಸೇವೆಯಿಂದ ನಿವೃತ್ತಿಗೊಂಡ ಪಾಲಾಕ್ಷಿ ಮೂಲಿಮನಿ, ಶಶಿಕಲಾ ಸುಗೂರು, ಅಮೀನಸಾಬ ಕರಡಿ, ಗದ್ದೆಪ್ಪ ನಾಯಕ ಅವರಿಗೆ ಸನ್ಮಾನಿಸಿದರು.

ಪಾಲಾಕ್ಷಿ ಮೂಲಿಮನಿ, ಶಶಿಕಲಾ ಸುಗೂರು, ಶರಣಪ್ಪ ಆನೆಹೊಸೂರು, ಅಮರೇಶ ಉಳಾಗಡ್ಡಿ ಮಾತನಾಡಿದರು. ಮುದಗಲ್ ಪುರಸಭೆ ಮಾಜಿ ಅಧ್ಯಕ್ಷ ಅಶೋಗೌಡ ಆದಾಪುರ ಅಧ್ಯಕ್ಷತೆ ವಹಿಸಿದ್ದರು. ಆರು ದಿನ ನಡೆಯುವ ನಾಟಕದಲ್ಲಿ ಬುಧವಾರ ಚಿತ್ರದುರ್ಗದ ಸಾಣೆಹಳ್ಳಿ ಶಿವ ಸಂಚಾರ ಕಲಾ ತಂಡದಿಂದ ಜಂಗಮದೆಡೆಗೆ ನಾಟಕ ಪ್ರದರ್ಶನಗೊಂಡಿತು. ಜ. 8 ರಂದು ಕಳ್ಳರು ಸಂತೆ, ಜ. 9 ರಂದು ಶಿವಯೋಗಿ ಸಿದ್ಧರಾಮೇಶ್ವರ ನಾಟಕ ಪ್ರದರ್ಶನ ಗೊಳ್ಳುತ್ತವೆ. ಜ.11 ರಂದು ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಕಸಬಾ ಗ್ರಾಮದ ಯಕ್ಷ ರಂಗಾಯಣದ ರಪರೇಟರಿ ಕಲಾ ತಂಡದಿಂದ ಸೋಮಿಯ ಸೌಭಾಗ್ಯ,

ಜ. 12 ರಂದು ಗುಲಾಮನ ಸ್ವಾತಂತ್ರ್ಯ ಯಾತ್ರೆ, ಜ. 13 ರಂದು ಮಹಾತ್ಮರ ಬರವಿಗಾಗಿ ಎಂಬ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಮೀನಾಬಿ ಮೋದಿನಸಾಬ, ಕರ್ನಾಟಕ ಜಾನಪದ ಪರಿಷತ್ತು ಲಿಂಗಸುಗೂರು ತಾಲ್ಲೂಕು ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀದೇವಿ ನಡುವಿನ ಮನಿ, ತಾಲ್ಲೂಕು ಪಂಚಾಯಿತಿ ಕೆಡಿಪಿ ಸದಸ್ಯ ಶರಣಪ್ಪ ಕಟಗಿ, ಸಂಗಪ್ಪ ಭಾವಿಮನ, ಸಂಗಪ್ಪ ಅಂಗಡಿ, ಸಂಜೀವಪ್ಪ ಮೂಲಿಮನಿ, ಶಿವನಗೌಡ ಪಾಟೀಲ ರಾಮತನಾಳ, ಹುಸೇನಸಾಬ ಕರ್ನಾಚಿ ಇದ್ದರು.

# ಪೂರ್ವಭಾವಿ ಸಭೆ ರಾಯಚೂರು ಉತ್ಸವ ಮನೆಮನೆಯ ಉತ್ಸವವಾಗಲಿ: ಗಣ್ಯ ಮಹನಿಯರ ಸಲಹೆ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜನವರಿ 08 (ಕರ್ನಾಟಕ ವಾರ್ತೆ): ಎಡೆದೊರೆ ನಾಡು ರಾಯಚೂರು ಉತ್ಸವ–2026 ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಇದು ಐತಿಹಾಸಿಕ ಪ್ರಯತ್ನ. ಜಿಲ್ಲಾಡಳಿತಕ್ಕೆ ಧನ್ಯವಾದಗಳು. ನಮ್ಮೂರಲ್ಲೂ ಉತ್ಸವ ಯಾವಾಗ ಆಗುತ್ತದೆ ಎಂದು ಕಾಯುತ್ತಿದ್ದೆವು. ಈದೀಗ ಆ ಕಾಲ ಕೂಡಿ ಬಂದಿದ್ದು ನಮ್ಮ ಪುಣ್ಯ. ಇದು ಮನೆಮನೆಯ ಉತ್ಸವ ಆಗಬೇಕು. ಜಿಲ್ಲಾಡಳಿತವು ಅರ್ಥಪೂರ್ಣ ಕಾರ್ಯಕ್ಕೆ ಮುಂದಾಗಿದೆ ಎನ್ನುವ ಅಭಿನಂದನಾರ್ಹ ಸಲಹೆಗಳು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರ ಅಧ್ಯಕ್ಷತೆಯಲ್ಲಿ ಜನವರಿ 08ರಂದು ನಡೆದ ರಾಯಚೂರು ಉತ್ಸವದ ಪೂರ್ವಭಾವಿ ಸಭೆಯಲ್ಲಿ ಕೇಳಿಬಂದವು.**



ಜಿಪಂ ಸಭಾಂಗಣದಲ್ಲಿ ನಡೆದ ಅಸಾಹಿತಿಗಳು, ಸಂಘ ಸಂಸ್ಥೆಗಳು, ವ್ಯಾಪಾರಸ್ಥರು, ಬುದ್ದಿಜೀವಿಗಳು, ಮಹಿಳಾ ಪ್ರಮುಖರು, ಹೋರಾಟಗಾರರ ಸಮ್ಮುಖದಲ್ಲಿ ಸಭೆಯಲ್ಲಿ ಮೊದಲಿಗೆ ಅಪರ ಜಿಲ್ಲಾಧಿಕಾ–ರಿಗಳು ಉತ್ಸವದ ರೂಪುರೇಷಗಳ ಬಗ್ಗೆ ತಿಳಿಸಿದರು. ಈ ವೇಳೆ ಜಿಲ್ಲೆಯ ಬೇರೆ ಬೇರೆ ಗಣ್ಯಮಹನಿಯರು ಮಾತನಾಡಿ ಉತ್ಸವಕ್ಕೆ ನಾನಾ ಸಲಹೆ ನೀಡಿದರು. ಇದು ಮನೆಮನೆಗಳ ಉತ್ಸವಾಗಲಿ ಎಂದು ಕನ್ನಡಪರ ಸಂಘಟನೆಯ ಸಿ.ಕೆ. ಜೈನ್ ಸಲಹೆ ಮಾಡಿದರು. ಎಲ್ಲರ ನೆನಪಿನಲ್ಲಿ ಉಳಿಯುವಂತಹ ಕಾರ್ಯಕ್ರಮ ಇದಾಗಲಿ ಎಂದು ಕರ್ನಾಟಕ ಸಂಘದ ಶ್ರೀನಿವಾಸ ತಿಳಿಸಿದರು. ಐತಿಹಾಸಿಕ ಕರ್ನಾಟಕ ಸಂಘದಿಂದ ಉತ್ಸವದ ಮೆರವಣಿಗೆ ಆರಂಭಿಸಬೇಕು. ಸ್ಮರಣ ಸಂಚಿಕೆ ಪ್ರಕಟಿಸಬೇಕು ಎಂದು ಕನ್ನಡಪರ ಹೋರಾಟಗಾರಾದ ಮುರಳೀಧರ ಸಲಹೆ ಮಾಡಿದರು. ಹಳ್ಳಿಹಳ್ಳಿಗಳಿಂದ ಬಸ್ಸಗಳ ವ್ಯವಸ್ಥೆ ಮಾಡಿ ಜನ ಸೇರಲು ಅನುಕೂಲ ಕಲ್ಪಿಸಿ, ಇದನ್ನು ಜನೋತ್ಸವ ಮಾಡಬೇಕು ಎಂದು ಹೋರಾಟಗಾರರಾದ ವಿನೋದ ರೆಡ್ಡಿ ಅವರು ಸಲಹೆ ಮಾಡಿದರು.

ಇದು ನಮ್ಮ ಕಾರ್ಯಕ್ರಮ. ಎಲ್ಲರೂ ನೋಡಿ ಮೆಚ್ಚುವಂತೆ ಈ ಉತ್ಸವ ಮಾಡೋಣ. ಹಂಪಿ ಉತ್ಸವ, ಕರಾವಳಿ ಉತ್ಸವ, ಲಕ್ಕುಂಡಿ ಉತ್ಸವ, ಬನವಾಸಿ ಉತ್ಸವ, ಕಿತ್ತೂರ ಉತ್ಸವ ರೀತಿ ಇನ್ಮೇಲೆ ರಾಯಚೂರು ಉತ್ಸವವು ಪ್ರತಿ ವರ್ಷ ನಡೆಯಬೇಕು ಎಂದು ಕರ್ನಾಟಕ ಸಂಘದ ಅಧ್ಯಕ್ಷರಾದ ಕೆ ಶಾಂತಪ್ಪ ಸಲಹೆ ಮಾಡಿದರು. ಜಿಲ್ಲೆಯ ಎಲ್ಲ ಕಲಾವಿದರಿಗೆ ಉತ್ಸವದಲ್ಲಿ ಅವಕಾಶ ಸಿಗಬೇಕು ಎಂದು ಕನ್ನಡ ಜಾಗೃತಿ ಸಮಿತಿಯ ಸದಸ್ಯರು ಸಲಹೆ ಮಾಡಿದರು. ಉತ್ಸವದಲ್ಲಿ ರಾಯಚೂರು ಹಿರಿಯ ಮಹನಿಯರ ಪರಿಚಯದ ಭಾವಚಿತ್ರ ಅಳವಡಿಸಲು ಬಹುಜನ ಸಂಘಟನೆಯ ಜೈಭೀಮ ಸಲಹೆ ಮಾಡಿದರು. ಉತ್ಸವದಲ್ಲಿ ಎಲ್ಲರಿಗೂ ಅವಕಾಶ ನೀಡಬೇಕು. ಉತ್ಸವವನ್ನು ಪ್ರತಿ ವರ್ಷ ನಡೆಸಬೇಕು ಎಂದು ನರೇಂದ್ರ ಅವರು ಸಲಹೆ ಮಾಡಿದರು.

ಜಿಲ್ಲೆಯಲ್ಲಿ ಬಹಳಷ್ಟು ಜಿಮ್ ಇದ್ದು, ಬಾಲಿಬಿಲ್ಡರಗಳ ಸ್ಪರ್ಧೆ ಆಯೋಜನೆ ಮಾಡಬೇಕು ಎಂದು ಪತ್ರಕರ್ತರಾದ ಕೆ.ಸತ್ಯನಾರಾಯಣ ಹಾಗೂ ಬಾಡಿ ಬಿಲ್ಡರ್ ಅಶೋಸಿಯೇಶನ್ ಸಂಘದ ಸುಧಾಕರ ಅವರು ಸಲಹೆ ಮಾಡಿದರು. ಬಾಡಿ ಬಿಲ್ಡರ್ ಕಿರಣ್ ವಾಲ್ಮಿಕಿ ಅವರಿಗೆ ಆಹ್ವಾನಿಸಬೇಕು ಎಂದು ಸಿ.ಕೆ.ಜೈನ್ ತಿಳಿಸಿದರು. ರಾಯಚೂರು ಜಿಲ್ಲೆಯ ಪತ್ರಿಕಾ ಇತಿಹಾಸದ ಬಗ್ಗೆ ವಿಚಾರಗೋಷ್ಠಿ ನಡೆಸಲು ಹಿರಿಯ ಪತ್ರಕರ್ತರಾದ ಗುರುನಾಥ ಅವರು ಸಲಹೆ ಮಾಡಿದರು. ಉತ್ಸವದಲ್ಲಿ ಮಾಧ್ಯಮಗೋಷ್ಠಿಗೆ ಅವಕಾಶವಿರಲಿ ಎಂದು ಪತ್ರಕರ್ತರಾದ ಖಾನಸಾಬ ಮೋಮಿನ್ ತಿಳಿಸಿದರು.

ಉತ್ಸವದಲ್ಲಿ ಅಂತಾರಾಷ್ಟ್ರೀಯ ಕಲಾವಿದರಿಗೆ ಅವಕಾಶ ನೀಡಬೇಕು ಎಂದು ಹಿರಿಯ ಪತ್ರಕರ್ತರಾದ ಅರವಿಂದ ಕುಲಕರ್ಣಿ ಅವರು ಸಲಹೆ ಮಾಡಿದರು. ಉತ್ಸವ ಹಿನ್ನೆಲೆಯಲ್ಲಿ ರಾಯಚೂರು ಕೋಟೆಗೆ ವಿದ್ಯುತ್ ಅಲಂಕಾರ ಮಾಡಲು ಮೊಮಿನ್ ಅವರು ಸಲಹೆ ಮಾಡಿದರು. ಜಿಲ್ಲೆಯ ಎಲ್ಲ ಸಂಘಟನೆಯ ಪ್ರತಿನಿಧಿಗಳಿಗೆ ಆಯಾ ವೇದಿಕೆಗೆ ಜವಾಬ್ದಾರಿ ವಹಿಸಬೇಕು ಎಂದು ಕಲಾ ಸಂಸ್ಥೆಯ ಅಧ್ಯಕ್ಷರು ಸಲಹೆ ಮಾಡಿದರು. ಬಿತ್ತನೆ ಬೀಜಗಳ ಬಗ್ಗೆ ಜನತೆ ಮೋಸ ಹೋಗುತ್ತಿದ್ದಾರೆ. ಹಾಗಾಗಿ ಜನತೆಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕೃಷಿ ಉತ್ಸವ ಮಾಡಬೇಕು ಯುವ ಮುಖಂಡರು ಸಲಹೆ ಮಾಡಿದರು. ವಿಚಾರಗೋಷ್ಠಿಯಲ್ಲಿ ಸಂವಿಧಾನ ವಿಷಯದ ಚರ್ಚೆಗೆ ಅವಕಾಶ ಮಾಡಬೇಕು ಎಂದು ಚಿಂತಕರು ಸಲಹೆ ಮಾಡಿದರು. ಉತ್ಸವದಲ್ಲಿ ಪ್ರತಿ ಮನೆಯ ಹೆಣ್ಣುಮಕ್ಕಳು ಪಾಲ್ಗೊಳ್ಳುವ ಹಾಗೆ ಮಹಿಳಾ ಕಮೀಟಿ ರಚಿಸಿ ಅವಕಾಶ ನೀಡಬೇಕು ಎಂದು ಪ್ರತಿಭಾ ರೆಡ್ಡಿ ಸಲಹೆ ಮಾಡಿದರು.

ರಾಯಚೂರು ಜಿಲ್ಲೆಯು ವಚನ ಮತ್ತು ದಾಸ ಸಾಹಿತ್ಯಕ್ಕೆ ಹೆಸರಾಗಿದ್ದು, ದಲಿತ ಬಂಡಾಯ ಸಾಹಿತ್ಯ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ಸಾಹಿತಿ ಬಾಬು ಬಂಡಾರಿಗಲ್ ತಿಳಿಸಿದರು. ಈ ಉತ್ಸವದಲ್ಲಿ ಜಿಲ್ಲೆಯ ಎಲ್ಲ ಭಾಗದ ಸಾಹಿತಿಗಳಿಗೆ ಅವಕಾಶ ಲಭಿಸಬೇಕು ಎಂದು ಹಿರಿಯ ಸಾಹಿತಿಗಳಾದ ರಂಗಣ್ಣ ಪಾಟೀಲ ಸಲಹೆ ಮಾಡಿದರು. ಮಹಿಳಾ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮಾಲಾ ಭಜಂತ್ರಿ ಅವರು ತಿಳಿಸಿದರು. ಮಹಿಳಾ ದೌರ್ಜನ್ಯ ಹೆಚ್ಚುತ್ತಿವೆ. ಇಂತಹ ವಿಷಯಗಳ ಬಗ್ಗೆ ವಿಚಾರಗೋಷ್ಠಿಯಲ್ಲಿ ಅವಕಾಶವಿರಲಿ ಎಂದು ಮಹಿಳಾ ಹೋರಾಟಗಾರರು ಸಲಹೆ ಮಾಡಿದರು. ರಾಯಚೂರು ಸಿಟಿಯ ಎಲ್ಲಾ ಕಡೆಗೆ ವಿದ್ಯುದೀಪ ಅಳವಡಿಸಿ ನಗರ ಸೌಂದರ್ಯಕ್ಕೆ ಒತ್ತು ಕೊಡಬೇಕು ಎಂದು ನರೇಂದ್ರ ಆರ್ಯ ಸಲಹೆ ಮಾಡಿದರು. ಮೆರವಣಿಗೆಯಲ್ಲಿ ಸ್ಥಬ್ಧಚಿತ್ರಕ್ಕೆ ಅವಕಾಶವಿರಬೇಕು. ಜನಜಾಗೃತಿಯ ಕಿರುಚಿತ್ರಗಳ ಪ್ರದರ್ಶನ ಮಾಡಬೇಕು. ಕರಾಟೆ ಸ್ಪರ್ಧೆಗೂ ಅವಕಾಶವಿರಬೇಕು ಎಂದು ಪತ್ರಕರ್ತ ರಘುವೀರ ನಾಯಕ ಸಲಹೆ ಮಾಡಿದರು.

ಎಲ್ಲರೂ ಸೇರಿ ಉತ್ಸವ ಯಶಗೊಳಿಸೋಣ ಎಂದು ಹಿರಿಯರಾದ ಶಶಿಕಲಾ ಭೀಮರಾಯ ಸಲಹೆ ಮಾಡಿದರು. ಉತ್ಸವದಲ್ಲಿ ಕ್ರೀಡಾಪಟುಗಳಿಗೆ ಸನ್ಮಾನಿಸಬೇಕು ಎಂದು ಖೋಖೋ ಅಸೋಸಿಯೇಶನದಿಂದ ಸಲಹೆ ಬಂದಿತು. ಉತ್ಸವದಲ್ಲಿ ಏರ್ ಶೊ ಗೆ ವ್ಯವಸ್ಥೆ ಮಾಡಬೇಕು ಎಂದು ಯುವಕರು ಸಲಹೆ ಮಾಡಿದರು. ರಾಜ್ಯೋತ್ಸವ ಪುರಸ್ಕೃತರನ್ನು ಉತ್ಸವದಲ್ಲಿ ಸನ್ಮಾನಿಸಿ ಗೌರವಿಸಬೇಕು ಎಂದು ಪತ್ರಕರ್ತರಾದ ಅಣ್ಣಪ್ಪ ಮೇಟಿಗೌಡ ಅವರು ಸಲಹೆ ಮಾಡಿದರು. ಸಭೆಯಲ್ಲಿ ಸವಿತಾ ಸಮಾಜದ ವಿ ಗೋವಿಂದ, ಛಾಯಾಗ್ರಹಕರ ಸಂಘದ ಅಧ್ಯಕ್ಷರಾದ ಶರಣಬಸವ ಹಿರೇಮಠ, ಮಹಿಳಾ ಮುಖಂಡರಾದ ಲಕ್ಷ್ಮಿ ನರಸಿಂಹ, ಗಾಯತ್ರಿ ಹಾಗೂ ಇತರರು ಸಲಹೆ ಮಾಡಿದರು. ಈ ವೇಳೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಮಾತನಾಡಿ, ಉತ್ಸವಕ್ಕೆ ಸ್ಫೂರ್ತಿದಾಯಕ ಸಲಹೆಗಳು ಕೇಳಿ ಬಂದಿವೆ. ಎಲ್ಲ ಸಲಹೆಗಳನ್ನು ಪರಿಗಣಿಸುತ್ತೇವೆ. ಪ್ರತಿ ತಾಲೂಕಿನಲ್ಲಿ ಸಹ ಸಂಘ ಸಂಸ್ಥೆಗಳ ಸಭೆಯನ್ನು ತಹಸೀಲ್ದಾರ ಮತ್ತು ಇಓ ಸಮ್ಮುಖದಲ್ಲಿ ಮಾಡಿಸುತ್ತೇವೆ ಎಂದು ತಿಳಿಸಿದರು. ಈ ಉತ್ಸವವನ್ನು ಪ್ರತಿ ವರ್ಷ ನಡೆಸುವ ಹಾಗೆ ಕುಟುಂಬದ ರೀತಿ ಎಲ್ಲರೂ ಸೇರಿ ಉತ್ಸವ ಮಾಡೋಣ ಎಂದು ಮನವಿ ಮಾಡಿದರು. ಹಂಪಿ ಉತ್ಸವ ಮಾದರಿಯಲ್ಲಿ ಏರ್ ಶೋ ಹಾಗೂ ಮಕ್ಕಳ ಉತ್ಸವಕ್ಕೆ ವ್ಯವಸ್ಥೆ ಮಾಡುವುದಾಗಿ ಹೇಳಿದರು. ಸಭೆಯಲ್ಲಿ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಸಹಾಯಕ ಆಯುಕ್ತರಾದ ಡಾ.ಹಂಪಣ್ಣ, ತಹಸೀಲ್ದಾರರಾದ ಸುರೇಶ ವರ್ಮಾ, ಅಮರೇಶ ಬಿರಾದಾರ ಹಾಗೂ ಇನ್ನೀತರರು ಉಪಸ್ಥಿತರಿದ್ದರು.